
# ಮಕ್ಕಳ ಹಕ್ಕುಗಳು ಮತ್ತು ನಾವು



● ಕೊಣಿಲ ರಾಘವೇಂದ್ರ ಭಟ್

ಪ್ರೀತಿ, ಬಾಲ್ಯ, ಶಿಕ್ಷಣ ಮಕ್ಕಳ ಜನ್ಮಸಿದ್ಧ ಹಕ್ಕು

# ಮಕ್ಕಳ ಹಕ್ಕುಗಳು ಮತ್ತು ನಾವು

## ಪ್ರೀತಿ, ಬಾಲ್ಯ, ಶಿಕ್ಷಣ ಮಕ್ಕಳ ಜನ್ಮಸಿದ್ಧ ಹಕ್ಕು



ಕೊಣೆಲ ರಾಘವೇಂದ್ರ ಭಟ್

: ಪ್ರಕಟಣೆ :

ಜಿಲ್ಲಾಡಳಿತ, ಯುನಿಸೆಫ್ / ನೊರಾಡ್ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ, ಜಿಲ್ಲಾ ಕ್ರಿಯಾಯೋಜನೆ, ಕಾರ್ಮಿಕ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ, ☎ : 237332, 256459, 256626, 230094, 231607

ಜಿಲ್ಲಾಧಿಕಾರಿಗಳವರ ಕಛೇರಿ, ಪಿ. ಬಿ. ರೋಡ್. ರೈತ ಭವನ, ದಾವಣಗೆರೆ - 577002

ಅವನಾಗಲಿ ಅವಳಾಗಲಿ, ಪಾಟಿ ಪೆನ್ನು ಹಿಡಿಯಲಿ

**Makkala Hakkugalu Mathu Navu :**
**a brief information on Child Rights & Child Labour**

ಪ್ರಕಟಣೆ :ಜಿಲ್ಲಾಡಳಿತ, ಯುನಿಸೆಫ್ / ನೊರಾಡ್ ಯೋಜನೆ, ಜಿಲ್ಲಾ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆ, ಕಾರ್ಮಿಕ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ.

ಮೊದಲ ಆವೃತ್ತಿ : ನವಂಬರ್ - 2003

ಪ್ರತಿಗಳು : 8,000


ಪುಟ : 28+4

ಹಕ್ಕುಗಳು : ಜಿಲ್ಲಾಡಳಿತ ದಾವಣಗೆರೆ

ಲೇಖಕರು ಮತ್ತು
ಪರಿಕಲ್ಪನೆ :ಕೊಣೆಲ ರಾಘವೇಂದ್ರ ಭಟ್

ಮುಖಪುಟ
ಮತ್ತು ವಿನ್ಯಾಸ : ರಫೀಕ್ ಉಪ್ಪಿನಂಗಡಿ

ಮುದ್ರಣ : ಗುಡ್‌ಟಚ್, ಮೈಸೂರು. ☎ : 2512626






# ಮುನ್ನುಡಿ

ಬಾಲ ಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಕಳಂಕ. ಈ ಸಮಸ್ಯೆಗೆ ಸಮಾಜದ ಪ್ರತಿಯೊಬ್ಬರೂ ಕಾರಣ. ಈ ಅಮಾನವೀಯ ಪದ್ಧತಿಯ ನಿರ್ಮೂಲನೆಗೆ ಸಮಾಜದ ಎಲ್ಲಾ ವರ್ಗದವರು ಒಟ್ಟಾಗಿ ಸಂಘಟಿತ ಪ್ರಯತ್ನದಲ್ಲಿ ಮುಂದೆ ಬಂದು ಮಕ್ಕಳನ್ನು ಶಾಲೆಗೆ ದಾಖಲಿಸುವ ಮುಖಾಂತರ ಶ್ರಮಿಸಬೇಕು. ಮಕ್ಕಳಿಗೆ ಅವರದ್ದೇ ಆದ ಕನಸು ಮತ್ತು ಹಕ್ಕುಗಳು ಇವೆ. ಇದನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಮಾನ್ಯತೆ ನೀಡಲಾಗಿದೆ. ಇದನ್ನು ಅರಿತು ಎಲ್ಲರಿಗೂ ಜಾಗೃತಿ ಮೂಡಿಸುವ ಕರ್ತವ್ಯ ನಮ್ಮೆಲ್ಲರದು. ಮುಖ್ಯವಾಗಿ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂಧಿ ಈ ವಿಚಾರವಾಗಿ ಹೆಚ್ಚಿನ ಆಸಕ್ತಿ ವಹಿಸಿ ಕಾರ್ಯವೆಸಗುವ ಅಗತ್ಯ ತುಂಬಾ ಇದೆ.

2007ನೇ ವರ್ಷಕ್ಕೆ ಕರ್ನಾಟಕವನ್ನು ಬಾಲ ಕಾರ್ಮಿಕ ರಹಿತ ರಾಜ್ಯವನ್ನಾಗಿ ಮಾಡುವ ಹಿನ್ನೆಲೆಯಲ್ಲಿ, ನಮ್ಮ ಜಿಲ್ಲೆಯಲ್ಲಿ ಯುನಿಸೆಫ್/ನೊರಾಡ್ ಯೋಜನೆ, ಜಿಲ್ಲಾ ಕ್ರಿಯಾ ಯೋಜನೆ ಕಾರ್ಯಗತವಾಗುತ್ತಿದೆ. ದಾವಣಗೆರೆ ಜಿಲ್ಲೆ, ತಾಲ್ಲೂಕನ್ನು ಬಾಲ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸುವಲ್ಲಿ ಈ ಯೋಜನೆಗಳು ಮಹತ್ತರ ಪಾತ್ರವಹಿಸಲಿದೆ. ಅದಕ್ಕೆ ನಿಮ್ಮೆಲ್ಲರ ಪೂರ್ಣ ಸಹಕಾರ, ಭಾಗವಹಿಸುವಿಕೆ, ಕ್ರಮ ಬಹಳ ಮುಖ್ಯ.

ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ಹಾಗೂ ಬಾಲಕಾರ್ಮಿಕ ಪದ್ಧತಿ ಕುರಿತು ಮಾಹಿತಿ ನೀಡುವ ಈ ಹೊತ್ತಿಗೆ ನಿಮಗೆ ಸಹಕಾರಿಯಾಗಲಿದೆ. ಎಲ್ಲಾ ಮಕ್ಕಳಿಗೆ ಬಾಲ್ಯ ಶಿಕ್ಷಣ ಒದಗಿಸುವಲ್ಲಿ ಮತ್ತು ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಕ್ರಿಯಾಶೀಲರಾಗಿ ಕಾರ್ಯಪ್ರವೃತ್ತರಾಗಬೇಕೆಂದು ಜಿಲ್ಲಾಡಳಿತದ ಪರವಾಗಿ ಕೋರುತ್ತೇನೆ.



**ಎಂ. ಎಸ್. ರವಿಶಂಕರ್ ಭಾ.ಆ. ಸೇ**
*ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು*
*ಯೂನಿಸೆಫ್/ನೊರಾಡ್ ಯೋಜನೆ*
ದಾವಣಗೆರೆ.

# ಯುನಿಸೆಫ್ / ನೊರಾಡ್ ಯೋಜನೆ, ದಾವಣಗೆರೆ.

ಯುನಿಸೆಫ್ ಮತ್ತು ನಾರ್ವೇ ಸರ್ಕಾರ ಕರ್ನಾಟಕದಲ್ಲಿ ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಕೈ ಜೋಡಿಸಿ ಎಲ್ಲಾ ಮಕ್ಕಳ ಶಿಕ್ಷಣಕ್ಕೆ ಕಾರ್ಯನಿರ್ವಹಿಸುತ್ತಿದೆ. ಇದು ಕರ್ನಾಟಕ ಸರ್ಕಾರದ ಮುಖಾಂತರ ಜಾರಿಗೊಳ್ಳುತ್ತದೆ. ಈ ಯೋಜನೆ 2002 ರಿಂದ ಆರಂಭಗೊಂಡಿದ್ದು, ರಾಜ್ಯದ 2 ಜಿಲ್ಲೆಗಳ 2 ತಾಲ್ಲೂಕುಗಳಲ್ಲಿ ಮಾತ್ರ ಮಾದರಿಯಾಗಿ ಕಾರ್ಯನಿರ್ವಸುತ್ತದೆ. ಅವು ಗುಲ್ಬರ್ಗ ಮತ್ತು ದಾವಣಗೆರೆ.

ಈ ಯೋಜನೆಯ ಮುಖ್ಯ ಗುರಿ 3 ವರ್ಷದೊಳಗೆ ದಾವಣಗೆರೆ ತಾಲ್ಲೂಕನ್ನು ಬಾಲಕಾರ್ಮಿಕ ರಹಿತ ತಾಲ್ಲೂಕನ್ನಾಗಿ ಮಾಡುವುದು ಹಾಗೂ ಈ ಕಾರ್ಯಕ್ರಮ ಎಲ್ಲಾ ಸರ್ಕಾರಿ ಇಲಾಖೆಗಳ ಸಹಭಾಗಿತ್ವ, ಸ್ವಯಂಸೇವಾ ಸಂಸ್ಥೆಗಳ ಮತ್ತು ಸಮುದಾಯದ ಭಾಗವಹಿಸುವವರೊಂದಿಗೆ ಆಗಬೇಕೆಂಬುದು ನೀತಿ.

ಅದರಂತೆ ಕಳೆದ ವರ್ಷ 5 ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ವಿಶೇಷ ಶಾಲೆಗಳಲ್ಲಿ 373 ಮಕ್ಕಳು ದುಡಿಮೆಯಿಂದ ಮುಕ್ತಿಪಡೆದು ಮುಖ್ಯ ಶಿಕ್ಷಣ ವಾಹಿನಿಗೆ ದಾಖಲಾಗಿದ್ದಾರೆ. ಇದರಲ್ಲಿ 94 ಮಕ್ಕಳು ಕಡಿಮೆ ಅವಧಿಯಲ್ಲಿಯೇ ವಸತಿ ಶಾಲೆಯಲ್ಲಿದ್ದು ಮುಖ್ಯ ಶಿಕ್ಷಣ ವಾಹಿನಿಗೆ ದಾಖಲಾಗಿದ್ದಾರೆ. 36 ಮಕ್ಕಳು ಅಪಾಯಕಾರಿ ಕ್ಷೇತ್ರದವರಾಗಿದ್ದಾರೆ. ಅಲ್ಲದೆ ಹಲವಾರು ತರಬೇತಿಗಳು, ಕಾರ್ಯಗಾರಗಳು ಇಲಾಖೆ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ನಡೆದಿವೆ. ಅಲ್ಲದೆ ಜಿಲ್ಲಾ ಕ್ರಿಯಾ ಯೋಜನೆಯಡಿಯಲ್ಲಿ 10 ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ 580 ಮಕ್ಕಳನ್ನು ಮುಖ್ಯ ಶಿಕ್ಷಣ ವಾಹಿನಿಗೆ ದಾಖಲಿಸಲಾಗಿದೆ.

ಇದೀಗ 2ನೇ ವರ್ಷದಲ್ಲಿ 6 ವಿಶೇಷ ವಸತಿ ಶಾಲೆಗಳು ಡಾನ್ ಬಾಸ್ಕೋ, ಗುರಿ, ಬೆಳಕು, ದಲಿತ ಮಹಾಸಭಾ, ಸೈಂಟ್ ಜಾನ್ಸ್ ಮತ್ತು ಸೀಡ್ಸ್ ಸಂಸ್ಥೆಗಳ ಮುಖಾಂತರ ಪ್ರಾರಂಭವಾಗಿದ್ದು 600 ಬಾಲ ಕಾರ್ಮಿಕ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ. ಹಾಗೂ 5 ವಸತಿ ರಹಿತ ಶಾಲೆಗಳಲ್ಲಿ 250 ಬಾಲಕಾರ್ಮಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಮತ್ತು ಜಿಲ್ಲಾ ಕ್ರಿಯಾ ಯೋಜನೆಯಡಿಯಲ್ಲಿ 9 ವಿಶೇಷ ವಸತಿ ಶಾಲೆಗಳ ಮುಖಾಂತರ 450 ಬಾಲ ಕಾರ್ಮಿಕ ಮಕ್ಕಳಿಗೆ ಪುನರ್ವಸತಿ ನೀಡಲಾಗಿದೆ. ಕಾರ್ಮಿಕ ಇಲಾಖೆಯ ನೇತೃತ್ವದಲ್ಲಿ 40 ದಿನಗಳ ಕಾಲ ಮಕ್ಕಳು ದುಡಿಯುತ್ತಿರುವ ಕ್ಷೇತ್ರಗಳಿಗೆ ದಾಳಿ ನಡೆಸಿ ಮಕ್ಕಳ ಬಿಡುಗಡೆ, ಮತ್ತು ಮೊಕದ್ದಮೆ ದಾಖಲು ಮಾಡುವ ಕಾರ್ಯ ನಡೆದಿದೆ. ನಿರಂತರವಾಗಿ ನಡೆಯಲಿದೆ. ಶಿಕ್ಷಣ ಇಲಾಖೆ ಮುಖಾಂತರ ದಾಖಲಾತಿ, ತರಬೇತಿಗಳು ನಡೆಯುತ್ತಿವೆ.

ಯೋಜನೆ ವತಿಯಿಂದ, 1 ತಿಂಗಳ ಅರಿವಿನ ಜಾಥಾ ನಡೆದಿದ್ದು, 175 ಗ್ರಾಮ ಮತ್ತು 5 ವಾರ್ಡ್‌ಗಳಲ್ಲಿ ಸಂದೇಶ ಮುಟ್ಟಿಸಲಾಗಿದೆ. ಇದರಲ್ಲಿ ಅಕ್ಷರದಾನ ಸಮಿತಿಯ ಕಾರ್ಯಕರ್ತರೂ ಭಾಗವಹಿಸಿರುತ್ತಾರೆ.

ಈ ಯೋಜನೆಯಲ್ಲಿ ಪೋಲೀಸ್ ಇಲಾಖೆ ಮತ್ತು ಇತರೆ ಎಲ್ಲಾ ಇಲಾಖೆಗಳ ಸಹಕಾರ ನಿಜಕ್ಕೂ ಪ್ರಶಂಸನೀಯ ಇನ್ನೂ ಮುಂದಿನ ಯಶಸ್ಸಿಗೆ ನಿಮ್ಮೆಲ್ಲರ ಭಾಗವಹಿಸುವಿಕೆ, ಸರ್ಕಾರದ ಬೆಂಬಲ ಬಹಳ ಮುಖ್ಯವಾಗಿದೆ. ಆ ನಿಟ್ಟಿನಲ್ಲಿ ದುಡಿಯುವ ಮಕ್ಕಳ ಬಾಲ್ಯ ಹಾಗೂ ಶಿಕ್ಷಣಕ್ಕಾಗಿ ನೀವೆಲ್ಲಾ ಒಟ್ಟಾಗಿ ಕಾರ್ಯಪ್ರವೃತ್ತರಾಗಬೇಕು.

# ಹಕ್ಕು





ಜೀವನಕ್ಕೆ ಅಗತ್ಯವಾದ ಮೂಲಭೂತ ಅವಶ್ಯಕತೆಗಳು, ಪಡೆಯಲೇಬೇಕಾದ್ದು, ಲಭಿಸಬೇಕಾದ್ದು ಯಾರೂ ಅದನ್ನು ಕಸಿಯದೇ ತೀರಾ ಅಗತ್ಯವಾಗಿ ಅನುಭವಿಸಬೇಕಾದ್ದು ಹಕ್ಕು ಅನ್ನಿಸುತ್ತದೆ.

ತೀರಾ ಅಗತ್ಯವಾದ ಮೂಲ ಅವಶ್ಯಕತೆಗಳು, ಯಾವುದು ನ್ಯಾಯ ಸಮ್ಮತವೋ, ಯಾವುದನ್ನು ಸ್ವಾಭಾವಿಕವಾಗಿ ನಿರಾಕರಿಸಲಾಗದೋ, ಯಾವುದನ್ನು ತಡೆಹಿಡಿಯಲಾಗದೋ, ಉಲ್ಲಂಘಿಸಬಾರದೋ ಅದು "ಹಕ್ಕು" ಎಂಬ ಅರ್ಥ ಪಡೆಯುವುದು.

## ಮಕ್ಕಳ ಹಕ್ಕು


"ಮಕ್ಕಳ ಹಕ್ಕು" ಎಂದರೆ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅವಶ್ಯಕತೆಗಳು, ಅಗತ್ಯವಾದದ್ದು, ಬೇಕೇ ಬೇಕಾದ್ದು, ಲಭಿಸಬೇಕಾದ್ದು, ಪಡೆಯಲೇಬೇಕಾದ್ದು ವಯಸ್ಕರು ಅವರಿಗೆ ನೀಡಲೇಬೇಕಾದುದು, ಅವರು ಅನುಭವಿಸಬೇಕಾದ್ದು "ಮಕ್ಕಳ ಹಕ್ಕು".

## ಮಕ್ಕಳ ಹಕ್ಕುಗಳ ಒಡಂಬಡಿಕೆ

ಮಕ್ಕಳಿಗೆ ಕಾನೂನುಬದ್ಧವಾಗಿ ಅನುಭವಿಸಲು ಅವರ ಹಕ್ಕುಗಳನ್ನು ನೀಡಬೇಕು ಎನ್ನುವ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ 1979 ರಿಂದ ಚರ್ಚೆ ನಡೆಸಿ ಒಡಂಬಡಿಕೆಯನ್ನು ತಯಾರಿಸಿ, ಹಲವಾರು ಪ್ರತಿಗಳನ್ನು ಬರೆದು ವಿಮರ್ಶಿಸಿ 1989 ರಲ್ಲಿ ನವೆಂಬರ್ 12 ರಂದು ಒಂದು ರೂಪ ಕೊಟ್ಟು ಅಂಗೀಕರಿಸಿತು. ಇದಕ್ಕೆ 1990 ಜನವರಿ 29 ರಿಂದ ಜಗತ್ತಿನ ಎಲ್ಲಾ ರಾಷ್ಟ್ರಗಳನ್ನು ಸಹಿ ಮಾಡಲು ಆಹ್ವಾನಿಸಿ ಇಂದಿಗೆ 195 ರಾಷ್ಟ್ರಗಳು ಇದಕ್ಕೆ ಸಹಿ ಮಾಡಿವೆ.







**1992 ಡಿ-11 ರಂದು ಭಾರತ ಈ ಒಡಂಬಡಿಕೆಗೆ ಸಹಿ ಮಾಡಿ 18** ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಒಡಂಬಡಿಕೆಯಂತೆ ಹಕ್ಕುಗಳನ್ನು ನೀಡಿ ರಕ್ಷಿಸುತ್ತೇವೆ ಎಂದಿದೆ.


ಈ ಒಡಂಬಡಿಕೆಯಲ್ಲಿ ಮುಖ್ಯವಾಗಿ 54 ಪರಿಚ್ಛೇದಗಳಿದ್ದು, ಒಡಂಬಡಿಕೆಯ ಮೊದಲನೇ ಭಾಗದ 41 ಪರಿಚ್ಛೇದಗಳಲ್ಲಿ ಒಟ್ಟಾಗಿ ಮುಖ್ಯವಾಗಿ 4 ಹಕ್ಕುಗಳು ಎದ್ದು ಕಾಣುತ್ತವೆ. ಇವು ಇಡೀ ಒಡಂಬಡಿಕೆಯ 54 ಪರಿಚ್ಛೇದಗಳ ಬಹಳ ಪ್ರಮುಖವಾದ ನಾಲ್ಕು ಹಕ್ಕುಗಳು ಅವು ಯಾವುವೆಂದರೆ :

1. **ಬದುಕುವ ಹಕ್ಕು :-** ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ ಪಡೆಯುವ, ಪೌಷ್ಠಿಕ ಆಹಾರ ಪಡೆಯುವ, ಒಂದು ಹೆಸರು ಹೊಂದಿರುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.

2. **ರಕ್ಷಣೆಯ ಹಕ್ಕು :-** ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ ತುರ್ತು ಸಂದರ್ಭಗಳಲ್ಲಿ ಮತ್ತು ಶಸ್ತ್ರಾಸ್ತ್ರಗಳಿಂದ ರಕ್ಷಣೆ.

3. **ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು :-** ಶಿಕ್ಷಣ, ಬೆಳೆಯಲು ಅವಕಾಶ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ.

4. **ಭಾಗವಹಿಸುವ ಹಕ್ಕು :-** ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ, ಬುದ್ಧಿ ಚಟುವಟಿಕೆಗಳಿಗೆ ಅವಕಾಶ, ಸಂಘಟಿತರಾಗಿರುವುದು ಮತ್ತು ಧಾರ್ಮಿಕ ಹಕ್ಕುಗಳು.



# ಮಕ್ಕಳ ಹಕ್ಕುಗಳ ಒಡಂಬಡಿಕೆ

**ವಿಶ್ವಸಂಸ್ಥೆ ನವೆಂಬರ್ 20, 1989**
**ಭಾರತ ಸರ್ಕಾರ ಈ ಒಡಂಬಡಿಕೆಗೆ 1992 ರಲ್ಲಿ ಒಪ್ಪಿಗೆ ನೀಡಿದೆ**
**(ಒಡಂಬಡಿಕೆಯ ಸಾರ ಸಂಗ್ರಹ ಇಲ್ಲಿದೆ. ಪೂರ್ಣ ಪಾಠಕ್ಕಾಗಿ ದಾಖಲೆ ನೋಡಿ)**

ವಿಧಿ

1. ಸಾಮಾನ್ಯವಾಗಿ 18 ವರ್ಷದ ಕೆಳಗಿನ ಎಲ್ಲರನ್ನೂ ಮಗು, ಮಕ್ಕಳು ಎಂದು ಪರಿಗಣಿಸಲಾಗುತ್ತದೆ.
2. ಜಾತಿ, ವರ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಇತ್ಯಾದಿ ಯಾವುದೇ ಆಧಾರದಲ್ಲಿ ಮಕ್ಕಳಲ್ಲಿ ಭೇದ ಭಾವ ತೋರದೆ ಮಕ್ಕಳ ಹಕ್ಕುಗಳನ್ನು ಗೌರವಿಸಬೇಕು.
3. ಕಾಯಿದೆಗಳನ್ನು ರೂಪಿಸುವಾಗ ಮಕ್ಕಳ ಹಿತಾಸಕ್ತಿಗಳನ್ನು ಬಹುಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಬೇಕು.
4. ಮಕ್ಕಳ ಹಕ್ಕುಗಳನ್ನು ಸರಕಾರವು ಪ್ರಾಮಾಣಿಕವಾಗಿ ಜಾರಿಗೆ ತರಬೇಕು.
5. ಮಕ್ಕಳ ಬಗ್ಗೆ ಪೋಷಕರ, ಹೆತ್ತವರ ಜವಾಬ್ದಾರಿ ಮತ್ತು ಹಕ್ಕುಗಳನ್ನು ಸರಕಾರವು ಗೌರವಿಸಬೇಕು.



6. ಮಗುವಿಗೆ ಜೀವಿಸುವ ಹಕ್ಕು ಇದೆ. ಪ್ರತಿಯೊಂದು ಮಗುವೂ ಸಾಯದೆ ಬದುಕುವ, ವಿಕಾಸ ಹೊಂದುವಂತೆ ಮಾಡುವ ಜವಾಬ್ದಾರಿ ಸರಕಾರದ್ದಾಗಿದೆ.
7. ಮಗುವಿನ ಹುಟ್ಟನ್ನು ನೋಂದಣಿ ಮಾಡಬೇಕು. ಅದಕ್ಕೆ ತನ್ನದೇ ಆದ ಹೆಸರು, ರಾಷ್ಟ್ರೀಯತೆ ಹೊಂದುವ ಹಕ್ಕನ್ನು, ತನ್ನ ಹೆತ್ತವರು ಯಾರು ಎಂದು ತಿಳಿದುಕೊಳ್ಳುವ, ಹೆತ್ತವರಿಂದ ಆರೈಕೆ ಪಡೆಯುವ ಹಕ್ಕನ್ನು ದೊರಕಿಸಿಕೊಡಬೇಕು.
8. ಮಕ್ಕಳ ಅನನ್ಯತೆಯನ್ನು ರಕ್ಷಿಸಬೇಕು. ಅನನ್ಯತೆಯನ್ನು ಕಳೆದುಕೊಂಡಿದ್ದರೆ ಮರಳಿ ಅದನ್ನು ದೊರಕಿಸಿಕೊಡಬೇಕು.
9. ಪ್ರತಿಯೊಂದು ಮಗುವಿಗೂ ತನ್ನದೇ ಪೋಷಕರೊಂದಿಗೆ ಬದುಕುವ ಹಕ್ಕು ಇದೆ.
10. ಯಾವುದೇ ದೇಶಕ್ಕೆ ಹೋಗುವ, ಮರಳಿ ಬರುವ ಮತ್ತು ತಂದೆ ತಾಯಿಯರೊಂದಿಗೆ ಸಂಪರ್ಕ ಇರಿಸಿಕೊಳ್ಳುವ ಹಕ್ಕು ಮಗುವಿಗೆ ಇದೆ.

11. ಮಕ್ಕಳನ್ನು ಕಾನೂನಿಗೆ ವಿರುದ್ಧವಾಗಿ ಸ್ಥಳಾಂತರಿಸುವುದಾಗಲಿ, ಮರಳಿಸದಿರುವುದಾಗಲಿ ಕೂಡದು.

12. ತನ್ನ ಹಿತಕ್ಕೆ ಸಂಬಂಧಿಸಿದ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಮಗುವಿಗಿದೆ. ಹಿರಿಯರು ಅದನ್ನು ಆಲಿಸಿ ಪಾಲಿಸಬೇಕು.

13. ಯಾವುದೇ ಮಾಧ್ಯಮಗಳ ಮೂಲಕ ಮಾಹಿತಿ ಪಡೆಯುವ, ಮಾಹಿತಿ ನೀಡುವ ಹಕ್ಕು ಮಗುವಿಗೆ ಇದೆ.

14. ತನ್ನ ನಂಬಿಕೆ ಅಥವಾ ಧರ್ಮಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಹಕ್ಕು ಮಗುವಿಗೆ ಇದೆ.

15. ಸಂಘಟಿತರಾಗಲು ಮತ್ತು ಶಾಂತ ರೀತಿಯಿಂದ ಸಭೆ ಸೇರಲು ಮಕ್ಕಳಿಗೆ ಹಕ್ಕು ಇದೆ.

16. ತನ್ನ ವೈಯಕ್ತಿಕ, ಕೌಟುಂಬಿಕ ವ್ಯವಹಾರಗಳಲ್ಲಿ ಮೂರನೆಯವರು ಮೂಗು ತೂರಿಸುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕು ಮಗುವಿಗಿದೆ.

16. ತನ್ನ ವೈಯಕ್ತಿಕ, ಕೌಟುಂಬಿಕ ವ್ಯವಹಾರಗಳಲ್ಲಿ ಮೂರನೆಯವರು ಮೂಗು ತೂರಿಸುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕು ಮಗುವಿಗಿದೆ.

17. ದೇಶದ ಮತ್ತು ಅಂತರ್ ದೇಶೀಯ ವಿವಿಧ ಮೂಲಗಳಿಂದ ಮಾಹಿತಿ ಪಡೆಯಲು ಮಕ್ಕಳಿಗೆ ಸರಕಾರವು ಸೌಲಭ್ಯ ಒದಗಿಸಬೇಕು.

18. ತಮ್ಮ ಮಕ್ಕಳನ್ನು ಲಾಲಿಸಿ ಪಾಲಿಸಿ ಬೆಳೆಸುವ ಜವಾಬ್ದಾರಿಯನ್ನು ತಂದೆ ತಾಯಿಯರಿಬ್ಬರೂ ಹೊಂದಿದ್ದಾರೆ.

19. ಪೋಷಕರಾಗಲಿ ಅಥವಾ ಇನ್ನು ಯಾರೇ ಆಗಲಿ ಮಕ್ಕಳನ್ನು ದುರುಪಯೋಗ ಮಾಡುವಂತಿಲ್ಲ.

20. ತನ್ನ ಕುಟುಂಬದಿಂದ ಬೇರ್ಪಟ್ಟ ಮಗುವಿಗೆ ಸೂಕ್ತ ಪರ್ಯಾಯ ವ್ಯವಸ್ಥೆ ರಕ್ಷಣೆ ಸರಕಾರ ಒದಗಿಸಬೇಕು.

21. ದತ್ತು ನೀಡುವ, ಪಡೆಯುವ ಯಾವ ವ್ಯವಹಾರದಲ್ಲಿಯೂ ಮಗುವಿಗೆ ಅನ್ಯಾಯವಾಗಬಾರದು.

22. ನಿರಾಶ್ರಿತರಾದ, ನಿರ್ವಸಿತರಾದ ಮಕ್ಕಳಿಗೆ ಸರಕಾರವು ಸೂಕ್ತ ರಕ್ಷಣೆ ಒದಗಿಸಬೇಕು.

23. ಅಂಗವಿಕಲ ಮಕ್ಕಳಿಗೆ ವಿಶೇಷವಾದ ಆರೈಕೆ ಪಡೆದು ಸ್ವಾವಲಂಬನೆ ಮತ್ತು ಗೌರವದಿಂದ ಕೂಡಿದ ಜೀವನ ನಡೆಸುವ ಹಕ್ಕು ಇದೆ.

24. ಅತ್ಯುತ್ತಮವಾದ ಮತ್ತು ಗರಿಷ್ಠ ಮಟ್ಟದ ಆರೋಗ್ಯ ಸೇವಾ ಸೌಲಭ್ಯ ಪಡೆಯುವ ಹಕ್ಕು ಮಕ್ಕಳಿಗೆ ಇದೆ. ಗರ್ಭಿಣಿಯರಿಗೆ ಸೂಕ್ತ ಆರೋಗ್ಯ ಸೇವಾ ಸೌಲಭ್ಯದ ನಿರಾಕರಣೆಯು, ತಾಯಿಯ ಗರ್ಭದಲ್ಲಿರುವ ಮಗುವಿನ ಮೇಲೆ ಪರಿಣಾಮ ಬೀರುವುದರಿಂದ ತಾಯಂದಿರಿಗೆ ಆರೋಗ್ಯ ಸೇವಾ ಸೌಲಭ್ಯವು ಮಕ್ಕಳ ಹಕ್ಕು ಆಗಿದೆ.

25. ಪಾಲನೆ, ರಕ್ಷಣೆ, ಚಿಕಿತ್ಸೆಯ ಉದ್ದೇಶದಿಂದ ಮಕ್ಕಳನ್ನು ವಿಶೇಷ ಕೇಂದ್ರಗಳಲ್ಲಿ ಇರಿಸಿದ್ದರೆ ಅಲ್ಲಿನ ಪರಿಸ್ಥಿತಿಯನ್ನು ಆಗಾಗ ಪರಿಶೀಲಿಸುವುದೂ ಮಕ್ಕಳ ಹಕ್ಕುಗಳಲ್ಲಿ ಸೇರಿದೆ.

26. ಅಗತ್ಯ ಕಂಡಾಗಲೆಲ್ಲ ಸಾಮಾಜಿಕ ಭದ್ರತೆ ಹಾಗೂ ಜೀವ ವಿಮೆ ಹೊಂದುವ ಹಕ್ಕು ಇದೆ.

27. ಜೀವನ ಮಟ್ಟದ ಸುಧಾರಣೆ, ರಕ್ಷಣೆ ಇತ್ಯಾದಿಗಳಿಗೆ ಕೊರತೆ ಉಂಟಾದಾಗ ಅದನ್ನು ಸರಕಾರದಿಂದ ಪಡೆಯುವುದು ಮಕ್ಕಳ ಹಕ್ಕು.

28. ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಸರಕಾರ ಕೊಡಿಸಬೇಕು. ಉನ್ನತ ಶಿಕ್ಷಣ ಪಡೆಯಲು ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡಬೇಕು. ಮಕ್ಕಳ ಘನತೆ, ಗೌರವಗಳಿಗೆ ಶಾಲೆಯ ಶಿಸ್ತು ಪೋಷಕವಾಗುವಂತೆ ನೋಡಿಕೊಳ್ಳಬೇಕು.

29. ಮಗುವಿಗೆ ನೀಡುವ ಶಿಕ್ಷಣ ಉದ್ದೇಶ, ಅದರ ಉದ್ದೇಶ, ಅದರ ವ್ಯಕ್ತಿತ್ವ ಮತ್ತು ಪ್ರತಿಭೆಯನ್ನು ವಿಕಸಿಸುವಂತಿರಬೇಕು. ಸಮಾಜದಲ್ಲಿ ಸ್ವಾವಲಂಬಿಯಾಗಿ ಜವಾಬ್ದಾರಿಯ ಜೀವನ ನಡೆಸುವ ಶಿಕ್ಷಣ ಮಗುವಿಗೆ ಒದಗಿಸಬೇಕು. ತಂದೆ ತಾಯಿಯರು, ಮೂಲಭೂತ ಮಾನವ ಹಕ್ಕುಗಳು, ಸ್ವಾಭಾವಿಕ ಪರಿಸರ, ತಾನು ಹುಟ್ಟಿ ಬೆಳೆದ ಸಂಸ್ಕೃತಿ ಇತ್ಯಾದಿಗಳನ್ನು ಗೌರವಿಸುವ ಮನೋಭಾವವನ್ನು ಮಕ್ಕಳಲ್ಲಿ ಶಿಕ್ಷಣವು ಬೆಳೆಸುವಂತಿರಬೇಕು.

30. ಅಲ್ಪ ಸಂಖ್ಯಾತ ಸಮುದಾಯಗಳಿಗೆ, ಮೂಲ ನಿವಾಸಿ ಗುಂಪಿಗೆ ಸೇರಿದ ಮಕ್ಕಳಿಗೆ ತಮ್ಮದೇ ಆದ ಧರ್ಮ, ಸಂಸ್ಕೃತಿ, ಭಾಷೆ ಬಳಸುವ ಹಕ್ಕು ಇದೆ.

31. ವಿಶ್ರಾಂತಿ, ಆಟ ಹಾಗೂ ಸಾಂಸ್ಕೃತಿಕ ಕಲಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮಕ್ಕಳ ಹಕ್ಕು.

32. ಆರೋಗ್ಯ, ಶಿಕ್ಷಣ, ವಿಕಾಸಕ್ಕೆ ಅಡ್ಡಿ ಉಂಟು ಮಾಡುವ ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕು ಇದೆ. ಉದ್ಯೋಗಕ್ಕೆ ಸೇರಲು ಮಕ್ಕಳಿಗೆ ವಯೋಮಿತಿ ನಿಗದಿ ಪಡಿಸಿ, ಉದ್ಯೋಗದ ಸ್ಥಿತಿಗತಿಗಳನ್ನು ಸರಕಾರವು ನಿಯಂತ್ರಿಸಿ ನಿಯಮಿತ ಗೊಳಿಸಬೇಕು. ಕಾನೂನು ಬಾಹಿರ ಬಾಲ ಕಾರ್ಮಿಕತನಕ್ಕೆ ಅವಕಾಶ ನೀಡುವವರಿಗೆ ಸರಕಾರ ಶಿಕ್ಷೆ ವಿಧಿಸಬೇಕು.

33. ಮಕ್ಕಳು ಮಾದಕ ದ್ರವ್ಯಗಳು ಮತ್ತು ಮಾನಸಿಕ ಭ್ರಮಣೆಗೆ ಕಾರಣವಾಗುವ ದ್ರವ್ಯಗಳನ್ನು ಸೇವಿಸದಂತೆ ಸರಕಾರವು ಅವರನ್ನು ರಕ್ಷಿಸಬೇಕು. ಕಾನೂನು ಬಾಹಿರ ಮಾದಕ ದ್ರವ್ಯಗಳ ಉತ್ಪಾದನೆ, ಸಾಗಣೆ ವಿತರಣೆಗಳಲ್ಲಿ ಮಕ್ಕಳು ತೊಡಗದಂತೆ ದುರ್ಬಳಕೆಗೊಳ್ಳದಂತೆ, ಬಲಿಯಾಗದಂತೆ ಅವರನ್ನು ರಕ್ಷಿಸಬೇಕು.

34. ಯಾವುದೇ ರೀತಿಯ ಲೈಂಗಿಕ ಶೋಷಣೆಗೆ ಮಕ್ಕಳು ಬಲಿಯಾಗದಂತೆ ನೋಡಿಕೊಳ್ಳಬೇಕು. ಸೂಳೆಗಾರಿಕೆಗೆ ಈಡಾಗದಂತೆ ಹಾಗೂ ಅಶ್ಲೀಲ ಸಾಹಿತ್ಯ, ಚಿತ್ರಗಳ ಕಡೆಗೆ ಸೆಳೆಯಲ್ಪಡದಂತೆ ಮಕ್ಕಳನ್ನು ಸರಕಾರ ರಕ್ಷಿಸಬೇಕು.

35. ಮಕ್ಕಳ ಅಕ್ರಮ ಮಾರಾಟ, ವಿನಿಮಯ, ಸಾಗಾಟ ಇತ್ಯಾದಿಗಳನ್ನು ಸರಕಾರವು ತಡೆಯಬೇಕು.

36. ಮಕ್ಕಳನ್ನು ಎಲ್ಲ ರೀತಿಯ ಇತರ ಶೋಷಣೆಗಳಿಂದ ರಕ್ಷಿಸಬೇಕು.

37. ಕಾನೂನಿಗೆ ವಿರುದ್ಧವಾಗಿ ಮನಬಂದಂತೆ ಮಕ್ಕಳ ಸ್ವಾತಂತ್ರ್ಯ ಹರಣ ಮಾಡಕೂಡದು. ಈ ಬಗ್ಗೆ ಸರಕಾರ ಅವರಿಗೆ ರಕ್ಷಣೆ ನೀಡಬೇಕು. ಅಪರಾಧ ನಡೆಸಿದ ಮಕ್ಕಳೊಡನೆ ಮಾನವೀಯತೆಯಿಂದ ವ್ಯವಹರಿಸಬೇಕು. ಅವರನ್ನು ಸರಿದಾರಿಗೆ ತರಲು ಯತ್ನಿಸಬೇಕು. ಬಾಲಾಪರಾಧಿಗಳಿಗೆ ಚಿತ್ರಹಿಂಸೆ ಅಥವಾ ಇತರ ಕ್ರೂರ, ಅಮಾನವೀಯ ಶಿಕ್ಷೆ ನೀಡಕೂಡದು, ಮರಣದಂಡನೆ ಅಥವಾ ಅಜೀವ ಸೆರೆವಾಸ ಇತ್ಯಾದಿ ಶಿಕ್ಷೆಯ ಸಂದರ್ಭದಲ್ಲಿ ಮಕ್ಕಳನ್ನು ವಿಶೇಷವಾಗಿ ಗಮನದಲ್ಲಿರಿಸಿ ಸರಕಾರ ಅವರನ್ನು ರಕ್ಷಿಸಬೇಕು. ಬಾಲಾಪರಾದಿಗಳಿಗೆ ತಮ್ಮ ಕುಟುಂಬದೊಡನೆ ಸಂಪರ್ಕ ಹೊಂದಿರಲು, ಕಾನೂನು ನೆರವು ಪಡೆಯಲು ಅವಕಾಶ ಕಲ್ಪಿಸಬೇಕು.

38. 15 ವರ್ಷದೊಳಗಿನ ಮಗು ನೇರವಾಗಿ ಯುದ್ಧಗಳಲ್ಲಿ ಪಾಲ್ಗೊಳ್ಳದಂತೆ ತಡೆಯಬೇಕು. 15 ವರ್ಷದೊಳಗಿನ ಮಕ್ಕಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಾರದು. ಸಶಸ್ತ್ರ ಸಂಘರ್ಷಗಳ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ತೊಂದರೆಗೆ ಈಡಾಗುವ ಮಕ್ಕಳ ಪಾಲನೆಗೆ ಸರಕಾರ ರಕ್ಷಣೆ ನೀಡಬೇಕು.

39. ನಿರ್ಲಕ್ಷ್ಯ, ಶೋಷಣೆ, ಹಿಂಸೆ ಅಥವಾ ಯುದ್ಧ ಸಂದರ್ಭಗಳಲ್ಲಿ ತೊಂದರೆಗೀಡಾದ ಮಕ್ಕಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಗುಣಮುಖರಾಗಲು ಅವಕಾಶ ಮಾಡಿಕೊಡಬೇಕು.

40. ಅಪರಾಧ ಆರೋಪಕ್ಕೆ ಈಡಾದ ಮಕ್ಕಳನ್ನು ಗೌರವದಿಂದ ನಡೆಸಿಕೊಳ್ಳಬೇಕು. ಮಗುವಿನ ಮೇಲೆ ಆರೋಪಿಸಿದ ಅಪರಾಧವು ರುಜುವಾತು ಆಗುವವರೆವಿಗೂ ಅವರ ಮೇಲಿರುವ ಆಪಾದನೆಗಳ ಬಗ್ಗೆ ಅದಕ್ಕೆ ತಿಳಿಸಿ ಹೇಳಬೇಕು. ಅಂತಹ ಮಗುವಿಗೆ ಅಗತ್ಯವಾದ ಕಾನೂನು ಸಹಾಯ ಒದಗಿಸಬೇಕು. ಮಗುವಿನಿಂದ ಬಲವಂತವಾಗಿ ಸಾಕ್ಷಿ ಹೇಳಿಸುವುದಾಗಲಿ, ಆರೋಪವನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸುವುದಾಗಲಿ ಕೂಡದು ಈ ಬಗ್ಗೆ ಸರಕಾರಗಳು ರಕ್ಷಣೆ ಒದಗಿಸಬೇಕು.

41. ಯಾವುದೇ ದೇಶದ ಕಾನೂನುಗಳು ಮಕ್ಕಳ ಪಾಲಿಗೆ ಮಕ್ಕಳ ಅಂತರ ರಾಷ್ಟ್ರೀಯ ಒಡಂಬಡಿಕೆಯ ಅಂಶಗಳಿಗಿಂತಲೂ ಉತ್ತಮವಾಗಿದ್ದರೆ ಅವುಗಳನ್ನೇ ಎತ್ತಿ ಹಿಡಿಯಬೇಕು.



42. ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿನ ವಿಚಾರಗಳನ್ನು ವಿಧಿ ವಿಧಾನಗಳನ್ನು ಎಲ್ಲಾ ವಯಸ್ಕರಿಗೆ ಮತ್ತು ಮಕ್ಕಳಿಗೆ ತಿಳಿಸಲು ಸರಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕು.

43. ಒಡಂಬಡಿಕೆಯ ಉದ್ದೇಶಗಳ ಈಡೇರಿಕೆಗಾಗಿ ಕೈಗೊಂಡ ಕ್ರಮಗಳ ಪ್ರಗತಿಯ ಮೇಲೆ ನಿಗಾ ಇಡಲು, ಮಕ್ಕಳ ಹಕ್ಕುಗಳ ಸಂರಕ್ಷಣಾ ಸಮಿತಿಯನ್ನು ಸರಕಾರಗಳು ಸ್ಥಾಪಿಸಬೇಕು.

44. ಒಡಂಬಡಿಕೆಯಲ್ಲಿ ಒಪ್ಪಿಕೊಳ್ಳಲಾಗಿರುವ ಹಕ್ಕುಗಳನ್ನು ಜಾರಿಗೆ ತರಲು ಕೈಗೊಂಡ ಕ್ರಮಗಳು, ಸಾಧಿಸಲಾಗಿರುವ ಪ್ರಗತಿ, ಇವುಗಳ ಬಗ್ಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಮೂಲಕ, ಸಮಿತಿಗೆ ತಮ್ಮ ವರದಿಯನ್ನು ಸರಕಾರಗಳು ಸಲ್ಲಿಸಬೇಕು.

45. ಪ್ರಸ್ತುತ ಒಡಂಬಡಿಕೆಯನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಜಾರಿಗೆ ತರಲು ಮತ್ತು ಒಡಂಬಡಿಕೆಯ ವ್ಯಾಪ್ತಿಗೆ ಒಳಪಟ್ಟ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಹೊಂದಲು, ಸಂಬಂಧಪಟ್ಟ ಸಂಸ್ಥೆಗಳ, ಸರಕಾರಗಳ ಸಲಹೆ, ಸೂಚನೆ, ವರದಿ ಪಡೆದುಕೊಂಡು ಮುಂದುವರಿಯಬೇಕು.

46. ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಲು ಎಲ್ಲಾ ದೇಶಗಳಿಗೆ ಅವಕಾಶವಿದೆ.

47. ಸದರಿ ಒಡಂಬಡಿಕೆಯ ಮಾನ್ಯತೆ ಗಳಿಸಿದ ಬಳಿಕವೇ ಚಾಲ್ತಿಗೆ ಬರುತ್ತದೆ. ಮಾನ್ಯತೆಯು ದಾಖಲು ಪತ್ರಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಕಳುಹಿಸಬೇಕು.

48. ಯಾವ ದೇಶವೇ ಆಗಲಿ, ಯಾವಾಗಲಾದರೂ ಸರಿ ಈ ಒಡಂಬಡಿಕೆಯನ್ನು ಅಂಗೀಕರಿಸಿ ಅದರಂತೆ ನಡೆಯಬಹುದಾಗಿದೆ.



49. ಸದಸ್ಯ ದೇಶಗಳು ಒಡಂಬಡಿಕೆಗೆ ಮಾನ್ಯ ಮಾಡಿ ಅಧಿಕೃತ ಪತ್ರವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿದ ಮೂವತ್ತು ದಿನಗಳ ಬಳಿಕ ಈ ಒಡಂಬಡಿಕೆ ಆಯಾ ದೇಶಗಳಿಗೆ ಜಾರಿಗೆ ಬರುತ್ತದೆ.

50. ಯಾವ ದೇಶವೇ ಆಗಲಿ, ಪ್ರಸ್ತುತ ಒಡಂಬಡಿಕೆಗೆ ತಿದ್ದುಪಡಿ ಸೂಚಿಸಬಹುದು. ಬಹುಮತದ ಆಧಾರದ ಮೇಲೆ ಈ ಸೂಚನೆಗಳನ್ನು ಅಂಗೀಕರಿಸಿ ಅಳವಡಿಸಬಹುದಾಗಿದೆ.

51. ಈ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಮಾನ್ಯ ಗೊಳಿಸುವ ಸಮಯದಲ್ಲಿ ಸದಸ್ಯ ದೇಶಗಳು ಎತ್ತಬಹುದಾದ ಆಕ್ಷೇಪಣೆಗಳ ಪೂರ್ಣ ವಿವರವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಎಲ್ಲಾ ಸದಸ್ಯ ದೇಶಗಳಿಗೆ ಕಳುಹಿಸಬೇಕು. ಒಡಂಬಡಿಕೆಯ ಧ್ಯೇಯ ಉದ್ದೇಶಗಳಿಗೆ ವಿರುದ್ಧವಾದ ಆಕ್ಷೇಪಣೆಗಳಿಗೆ ಅವಕಾಶವಿಲ್ಲ.

52. ಸದಸ್ಯ ದೇಶಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ಲಿಖಿತ ಸೂಚನೆ ನೀಡಿ ಒಡಂಬಡಿಕೆಯಿಂದ ಹೊರಬರಬಹುದಾಗಿದೆ.

53. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಈ ಒಡಂಬಡಿಕೆಯ ಮೇಲ್ವಿಚಾರಕರು.

54. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಮೂಲ ಪ್ರತಿ ಮತ್ತು ಅರೇಬಿಕ್, ಚೈನೀ, ಇಂಗ್ಲೀಷ್, ಫ್ರೆಂಚ್, ರಶಿಯನ್ ಮತ್ತು ಸ್ಪ್ಯಾನಿಷ್‌ಗಳ ಭಾಷಾಂತರಿತ ಪ್ರತಿಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಬಳಿ ಇರಿಸಲಾಗಿದೆ. ತಮ್ಮ ತಮ್ಮ ದೇಶಗಳ ಸರಕಾರಗಳಿಂದ ಅಧಿಕಾರ ಪಡೆದ ಎಲ್ಲಾ ರಾಯಭಾರಿಗಳು ಈ ಒಡಂಬಡಿಕೆಗೆ ಸಹಿ ಹಾಕಿದ್ದಾರೆ.







# ಬಾಲ ಕಾರ್ಮಿಕ ಪದ್ಧತಿ
# ಒಂದು ವಿಶ್ಲೇಷಣೆ

**ಬಾಲ ಕಾರ್ಮಿಕರೆಂದರೆ ಯಾರು ? :-** "14 ವರ್ಷದೊಳಗಿನ ಯಾವ ಮಗು ಶಾಲೆಯಲ್ಲಿ ಇಲ್ಲವೋ ಅವರೆಲ್ಲರೂ ಬಾಲ ಕಾರ್ಮಿಕರು "14 ವರ್ಷದೊಳಗಿನ ಮಕ್ಕಳು ಶಾಲೆಯಿಂದ ಹೊರಗಿದ್ದು ತನ್ನ ಭೌದ್ಧಿಕ, ಮಾನಸಿಕ, ಶಾರೀರಿಕ, ಸಾಮಾಜಿಕ ಮತ್ತು ಭಾಷಾ ಬೆಳವಣಿಗೆಗಳಿಗೆ ತೊಡಕಾಗುವ ಯಾವುದೇ ಚಟುವಟಿಕೆಯಲ್ಲಿದ್ದು ತನ್ನ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದರೆ ಅವರೆಲ್ಲರೂ ಬಾಲಕಾರ್ಮಿಕರು ಎಂದೆನಿಸಿಕೊಳ್ಳುತ್ತಾರೆ.

**ಮಕ್ಕಳು ದುಡಿಯುವ ಕ್ಷೇತ್ರಗಳು :-** ಮಂಡಕ್ಕಿ ಭಟ್ಟಿ, ಗ್ಯಾರೇಜ್, ಹೋಟೆಲ್, ಕೂಲಿ, ಗದ್ದೆ, ಜೀತ, ದನ, ಕುರಿ, ಎಮ್ಮೆ ಮೇಯಿಸುವುದು, ಬೆಂಕಿಪೆಟ್ಟಿಗೆ, ಪಟಾಕಿ, ಕಲ್ಲಿನ ಗಣಿ, ಮೀನುಗಾರಿಕೆ, ಕೈಮಗ್ಗ, ಹತ್ತಿ, ಉಡುಪು ತಯಾರಿಕೆ, ಬೀಗ ತಯಾರಿಕೆ, ಇಟ್ಟಿಗೆ, ಜಮಖಾನೆ, ಗಾಜು, ಕುಂಬಾರಿಕೆ, ಹರಳು ತಿದ್ದುವಿಕೆ, ರತ್ನಗಂಬಳಿ, ಬೀದಿಮಕ್ಕಳು, ಮನೆ ಕೆಲಸ, ರೇಷ್ಮೆ, ಬೀಡಿ, ಅಗರಬತ್ತಿ, ವೀಳ್ಯದ ಎಲೆ ಕೊಯ್ಯುವುದು, ಚರ್ಮ, ಮಾಂಸದಂಗಡಿ, ಹಾಗೂ ಇಟ್ಟಿಗೆ ಹೀಗೆ ಹತ್ತು ಹಲವಾರು. ಮಕ್ಕಳು ಕೆಲಸ ಮಾಡದ ಕ್ಷೇತ್ರಗಳೇ ಇಲ್ಲ. ಇಂದು ಎಲ್ಲಾ ವಸ್ತುಗಳ ತಯಾರಿಕೆಯಲ್ಲಿ ಮಕ್ಕಳ ದುಡಿತ ಇದೆ.

**ಮಕ್ಕಳಿಂದ ಯಾಕೆ ದುಡಿಸುತ್ತಾರೆ :-** ಕಡಿಮೆ ಕೂಲಿ, ಹೆಚ್ಚು ಕೆಲಸ, ಹೆಚ್ಚು ಲಾಭ, ಪ್ರಾಮಾಣಿಕ ಕೆಲಸ, ಹೆಚ್ಚು ಸಮಯ ಕೆಲಸ, ನಿರಂತರ ಕೆಲಸ, ವೇಗದ ಕೆಲಸ, ಹಾಗೂ ಮಕ್ಕಳು ಪ್ರಶ್ನಿಸುವುದಿಲ್ಲ, ಘೇರಾವ್ ಹೂಡುವುದಿಲ್ಲ, ಸಂಘಟನೆ ಇಲ್ಲ, ಬೋನಸ್ ಕೇಳುವುದಿಲ್ಲ. ಹೇಳಿದಂತೆ ದುಡಿಯುತ್ತಾರೆ. ಅದಕ್ಕೆ ಮಕ್ಕಳೇ ಬೇಕು.

**ಬಾಲ ಕಾರ್ಮಿಕ ಪದ್ಧತಿಗೆ ಕಾರಣಗಳೇನು ? :-** ನೇರ ಉತ್ತರ, ಬಡತನ, ಅನಕ್ಷರತೆ ನಿರುದ್ಯೋಗ, ಮತ್ತು ಜನಸಂಖ್ಯೆ. ಆದರೆ ಇವುಗಳು ಯಾವುದೂ ನೇರವಾಗಿ ಬಾಲ ಕಾರ್ಮಿಕ ಪದ್ಧತಿಗೆ ಕಾರಣವಾಗಿಲ್ಲ. ಬದಲಾಗಿ "ಬಾಲ ಕಾರ್ಮಿಕ ಪದ್ಧತಿಯೇ" ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತಿದೆ ? ಎಂಬುದು ನಮಗೆ ತಿಳಿದಿರಲಿ. ಮಕ್ಕಳು ದುಡಿಯುತ್ತಿರುವುದರಿಂದ, ಬಡತನ ಮುಂದುವರಿದುಕೊಂಡು ಬಂದಿದೆ, ಅನಕ್ಷರತೆ ಜಾಸ್ತಿಯಾಗುತ್ತದೆ. ನಿರುದ್ಯೋಗ ಉಳಿದುಕೊಂಡಿದೆ. ಮಕ್ಕಳು ದುಡಿಯುವುದರಿಂದ ಶಿಕ್ಷಣ, ಜ್ಞಾನ ಇಲ್ಲದೆ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಮಕ್ಕಳು ದುಡಿಯುವುದರಿಂದ ಯಾವ ಬಡಕುಟುಂಬವೂ ಉದ್ಧಾರವಾಗಿಲ್ಲ ಬದಲಾಗಿ ಮತ್ತೆ ಬಡತನಕ್ಕೆ ಬಂದಿದೆ.



# ಬಾಲ ಕಾರ್ಮಿಕ ಪದ್ಧತಿ
# ಒಂದು ವಿಶ್ಲೇಷಣೆ



**ಬಾಲ ಕಾರ್ಮಿಕರೆಂದರೆ ಯಾರು ? :-** "14 ವರ್ಷದೊಳಗಿನ ಯಾವ ಮಗು ಶಾಲೆಯಲ್ಲಿ ಇಲ್ಲವೋ ಅವರೆಲ್ಲರೂ ಬಾಲ ಕಾರ್ಮಿಕರು "14 ವರ್ಷದೊಳಗಿನ ಮಕ್ಕಳು ಶಾಲೆಯಿಂದ ಹೊರಗಿದ್ದು ತನ್ನ ಬೌದ್ಧಿಕ, ಮಾನಸಿಕ, ಶಾರೀರಿಕ, ಸಾಮಾಜಿಕ ಮತ್ತು ಭಾಷಾ ಬೆಳವಣಿಗೆಗಳಿಗೆ ತೊಡಕಾಗುವ ಯಾವುದೇ ಚಟುವಟಿಕೆಯಲ್ಲಿದ್ದು ತನ್ನ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದರೆ ಅವರೆಲ್ಲರೂ ಬಾಲಕಾರ್ಮಿಕರು ಎಂದೆನಿಸಿಕೊಳ್ಳುತ್ತಾರೆ.

**ಮಕ್ಕಳು ದುಡಿಯುವ ಕ್ಷೇತ್ರಗಳು :-** ಮಂಡಕ್ಕಿ ಭಟ್ಟಿ, ಗ್ಯಾರೇಜ್, ಹೋಟೆಲ್, ಕೂಲಿ, ಗದ್ದೆ, ಜೀತ, ದನ, ಕುರಿ, ಎಮ್ಮೆ ಮೇಯಿಸುವುದು, ಬೆಂಕಿಪೆಟ್ಟಿಗೆ, ಪಟಾಕಿ, ಕಲ್ಲಿನ ಗಣಿ, ಮೀನುಗಾರಿಕೆ, ಕೈಮಗ್ಗ, ಹತ್ತಿ, ಉಡುಪು ತಯಾರಿಕೆ, ಬೀಗ ತಯಾರಿಕೆ, ಇಟ್ಟಿಗೆ, ಜಮಖಾನೆ, ಗಾಜು, ಕುಂಬಾರಿಕೆ, ಹರಳು ತಿದ್ದುವಿಕೆ, ರತ್ನಗಂಬಳಿ, ಬೀದಿಮಕ್ಕಳು, ಮನೆ ಕೆಲಸ, ರೇಷ್ಮೆ, ಬೀಡಿ, ಅಗರಬತ್ತಿ, ವೀಳ್ಯದ ಎಲೆ ಕೊಯ್ಯುವುದು, ಚರ್ಮ, ಮಾಂಸದಂಗಡಿ, ಹಾಗೂ ಇಟ್ಟಿಗೆ ಹೀಗೆ ಹತ್ತು ಹಲವಾರು. ಮಕ್ಕಳು ಕೆಲಸ ಮಾಡದ ಕ್ಷೇತ್ರಗಳೇ ಇಲ್ಲ. ಇಂದು ಎಲ್ಲಾ ವಸ್ತುಗಳ ತಯಾರಿಕೆಯಲ್ಲಿ ಮಕ್ಕಳ ದುಡಿತ ಇದೆ.

**ಮಕ್ಕಳಿಂದ ಯಾಕೆ ದುಡಿಸುತ್ತಾರೆ :-** ಕಡಿಮೆ ಕೂಲಿ, ಹೆಚ್ಚು ಕೆಲಸ, ಹೆಚ್ಚು ಲಾಭ, ಪ್ರಾಮಾಣಿಕ ಕೆಲಸ, ಹೆಚ್ಚು ಸಮಯ ಕೆಲಸ, ನಿರಂತರ ಕೆಲಸ, ವೇಗದ ಕೆಲಸ, ಹಾಗೂ ಮಕ್ಕಳು ಪ್ರಶ್ನಿಸುವುದಿಲ್ಲ, ಘೇರಾವ್ ಹೂಡುವುದಿಲ್ಲ, ಸಂಘಟನೆ ಇಲ್ಲ, ಬೋನಸ್ ಕೇಳುವುದಿಲ್ಲ. ಹೇಳಿದಂತೆ ದುಡಿಯುತ್ತಾರೆ. ಅದಕ್ಕೆ ಮಕ್ಕಳೇ ಬೇಕು.

**ಬಾಲ ಕಾರ್ಮಿಕ ಪದ್ಧತಿಗೆ ಕಾರಣಗಳೇನು ? :-** ನೇರ ಉತ್ತರ, ಬಡತನ, ಅನಕ್ಷರತೆ ನಿರುದ್ಯೋಗ, ಮತ್ತು ಜನಸಂಖ್ಯೆ. ಆದರೆ ಇವುಗಳು ಯಾವುದೂ ನೇರವಾಗಿ ಬಾಲ ಕಾರ್ಮಿಕ ಪದ್ಧತಿಗೆ ಕಾರಣವಾಗಿಲ್ಲ. ಬದಲಾಗಿ "ಬಾಲ ಕಾರ್ಮಿಕ ಪದ್ಧತಿಯೇ" ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತಿದೆ ? ಎಂಬುದು ನಮಗೆ ತಿಳಿದಿರಲಿ. ಮಕ್ಕಳು ದುಡಿಯುತ್ತಿರುವುದರಿಂದ, ಬಡತನ ಮುಂದುವರಿದುಕೊಂಡು ಬಂದಿದೆ, ಅನಕ್ಷರತೆ ಜಾಸ್ತಿಯಾಗುತ್ತದೆ. ನಿರುದ್ಯೋಗ ಉಳಿದುಕೊಂಡಿದೆ. ಮಕ್ಕಳು ದುಡಿಯುವುದರಿಂದ ಶಿಕ್ಷಣ, ಜ್ಞಾನ ಇಲ್ಲದೆ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಮಕ್ಕಳು ದುಡಿಯುವುದರಿಂದ ಯಾವ ಬಡಕುಟುಂಬವೂ ಉದ್ಧಾರವಾಗಿಲ್ಲ ಬದಲಾಗಿ ಮತ್ತೆ ಬಡತನಕ್ಕೆ ಬಂದಿದೆ.

ನಿಜವಾಗಿ ಬಾಲಕಾರ್ಮಿಕ ಪದ್ಧತಿಗೆ ಆರ್ಥಿಕ ನೀತಿ, ಮುಕ್ತ ಮಾರುಕಟ್ಟೆ, ಕೈಗಾರಿಕೀಕರಣ, ಖಾಸಗೀಕರಣ ಉದಾರೀಕರಣ ವ್ಯವಸ್ಥಿತ ರೀತಿಯಲ್ಲಿ ಜಾರಿಗೆ ಬರದೆ ಇರುವುದು, ಭೂಸುಧಾರಣೆ ಕಾಯಿದೆ ಜಾರಿಗೆ ಬರದೇ ಇರುವುದು, ಅಂತರಾಷ್ಟ್ರೀಯ ನೀತಿಗಳು, ಬಂಡವಾಳ ಶಾಹಿಗಳ ಒತ್ತಡ ಮತ್ತು ಸ್ವಾರ್ಥ, ಸುವ್ಯವಸ್ಥಿತ ಶಿಕ್ಷಣಕ್ಕೆ ಅಸಹಕಾರ, ಅಭಿವೃದ್ಧಿ ಕಾರ್ಯಗಳು ದೋಷಪೂರಿತವಾಗಿ ಜಾರಿಗೆ ಬರುತ್ತಿರುವುದು, ಪೋಷಕರ ಉದಾಸೀನತೆ, ಸಾರ್ವಜನಿಕರ ಜಡತ್ವ, ಮಕ್ಕಳ ಕಾನೂನುಗಳು ಜಾರಿಯಾಗದೆ ಇರುವುದು, ವಲಸೆ, ಕನಿಷ್ಟ ಕೂಲಿ ವೇತನ ಜಾರಿಯಾಗದಿರುದು ಮತ್ತು ಹಣದ ದುರುಪಯೋಗ.


## ನಿಮಗೆ ತಿಳಿದಿರಲಿ

1. 1986ರ ಬಾಲ ಕಾರ್ಮಿಕ ಪದ್ಧತಿ ನಿಷೇದ ಮತ್ತು ನಿಯಂತ್ರಣ ಕಾಯಿದೆ ಪ್ರಕಾರ, ಅಪಾಯಕಾರಿ ಕ್ಷೇತ್ರದಲ್ಲಿ ಮಕ್ಕಳ ದುಡಿಮೆ ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರಿಗೆ 10 ಸಾವಿರ ದಂಡ ಮತ್ತು ಮೂರು ವರ್ಷ ಜೈಲು.

2. 1976ರ ಜೀತ ಪದ್ಧತಿ ನಿರ್ಮೂಲನ ಕಾಯಿದೆ ಪ್ರಕಾರ ಯಾವುದೇ ಮಕ್ಕಳನ್ನು, ನಾಗರೀಕರನ್ನು ಜೀತಕ್ಕೆ ಸಂಬಳಕ್ಕೆ ಇಡುವಂತಿಲ್ಲ.

3. ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ 14 ವರ್ಷ ದೊಳಗಿನ ಮಕ್ಕಳ ದುಡಿಮೆ ನಿಷೇಧ. ಒಂದು ವೇಳೆ ದುಡಿಸಿ ದಲ್ಲಿ ಮಾಲೀಕರಿಗೆ 10 ಸಾವಿರ ತನಕ ದಂಡ ಮತ್ತು ಮೂರು ವರ್ಷ ಜೈಲು.






# ಬಾಲ ಕಾರ್ಮಿಕ ಪದ್ಧತಿ

**(ನಿಯಂತ್ರಣ ಮತ್ತು ನಿಷೇಧ ಕಾಯ್ದೆ, 1986ರ ಅನುಬಂಧ 3ರ ಅನ್ವಯ `ಬಾಲಕಾರ್ಮಿಕ' ಪದ್ಧತಿ ನಿಷೇಧಿತವಾಗಿರುವ ಉದ್ಯೋಗಗಳು / ಪ್ರಕ್ರಿಯೆಗಳು. (2001ಮೇ ತನಕದ ಎಲ್ಲಾ ತಿದ್ದುಪಡಿಗಳನ್ನು ಒಳಗೊಂಡಂತೆ)**

ವಿವರ ಪಟ್ಟಿ, ಭಾಗ A

## ಉದ್ಯೋಗಗಳು

1. ರೈಲುಮಾರ್ಗದ ಮೂಲಕ ಪ್ರಯಾಣಿಕರ, ಸರಕುಗಳ ಅಥವಾ ಅಂಚೆಯ ಸಾಗಾಣಿಕೆ.
2. ರೈಲ್ವೆ ಆವರಣದಲ್ಲಿ ಇದ್ದಿಲು ಆಯುವುದು, ಬೂದಿಗುಂಡಿಯನ್ನು ಶುಚಿಗೊಳಿಸುವುದು ಅಥವಾ ಕಟ್ಟಡ ನಿರ್ಮಾಣದ ಕೆಲಸ ಮಾಡುವುದು.
3. ರೈಲ್ವೆ ನಿಲ್ದಾಣದಲ್ಲಿ ಊಟ ತಿಂಡಿ ಮಾರಾಟ ಮಾಡುವ ಸ್ಥಾಪನೆಯಲ್ಲಿ ಕೆಲಸ ಮಾಡುವುದು, ಒಂದು ಪ್ಲಾಟ್ ಫಾರ್ಮ್‌ನಿಂದ ಮತ್ತೊಂದು ಪ್ಲಾಟ್‌ಫಾರ್ಮ್‌ಗೆ ಅಥವಾ ಚಲಿಸುವ ರೈಲುಗಾಡಿಯ ಒಳಗಡೆ ಅಥವಾ ಹೊರಗಡೆ ಓಡಾಡಿ ಮಾರಾಟ ಮಾಡುವ ಅಥವಾ ಉದ್ಯೋಗದಾತನನ್ನು ಒಳಗೊಂಡಂತೆ.
4. ರೈಲ್ವೆ ನಿಲ್ದಾಣದಲ್ಲಿ ಕಟ್ಟಡದ ಕಾಮಗಾರಿಗೆ ಸಂಬಂಧಿಸಿದ ಕೆಲಸ ಮಾಡುವುದು, ಒಂದು ಪ್ಲಾಟ್ ಫಾರ್ಮ್‌ನಿಂದ ಮತ್ತೊಂದು ಪ್ಲಾಟ್ ಫಾರ್ಮ್‌ಗೆ ಅಥವಾ ಚಲಿಸುವ ರೈಲುಗಾಡಿಯ ಒಳಗಡೆ ಅಥವಾ ಹೊರಗಡೆ ಓಡಾಡಿ ಮಾರಾಟ ಮಾಡುವ ಅಥವಾ ಉದ್ಯೋಗದಾತನನ್ನು ಒಳಗೊಂಡಂತೆ.
5. ಯಾವುದೇ ಬಂದರಿನ ಪರಿಮಿತಿಯಲ್ಲಿ ಬಂದರು ಪ್ರಾಧಿಕಾರದಲ್ಲಿ.
6. ತಾತ್ಕಾಲಿಕ ಪರವಾನಗಿಯೊಂದಿಗೆ ಸಿಡಿಮದ್ದು ಮಾರಾಟ ಮಾಡುವುದು ಹಾಗೂ ಪಟಾಕಿ ಮಾರಾಟ ಮಾಡುವುದಕ್ಕೆ ಸಂಬಂಧಿಸಿದ ಕೆಲಸಗಳು.
7. ಕಸಾಯಿಖಾನೆಗಳಲ್ಲಿ/ಪ್ರಾಣಿವಧೆ ನಡೆಸುವ ಅಂಗಡಿಗಳಲ್ಲಿ.
8. ಮೋಟಾರುವಾಹನಗಳ ವರ್ಕ್‌ಷಾಪ್ ಹಾಗೂ ಗ್ಯಾರೇಜುಗಳಲ್ಲಿ
9. ಕುಲುಮೆಗಳಲ್ಲಿ
10. ವಿಷವಸ್ತುಗಳ ಅಥವಾ ಉರಿಯುವ ವಸ್ತುಗಳ ಅಥವಾ ಸ್ಫೋಟಕ ವಸ್ತುಗಳ ನಿರ್ವಹಣೆಯಲ್ಲಿ.
11. ಕೈಮಗ್ಗ ಅಥವಾ ವಿದ್ಯುತ್ ಚಾಲಿತ ಮಗ್ಗದ ಉದ್ಯಮದಲ್ಲಿ
12. ಗಣಿಗಳು (ಭೂಮಿಯ ಅಡಿಯಲ್ಲಿ ಹಾಗೂ ನೀರಿನ ಅಡಿಯಲ್ಲಿ) ಹಾಗೂ ಕಲ್ಲಿದ್ದಲು ಗಣಿಗಳಲ್ಲಿ.
13. ಪ್ಲಾಸ್ಟಿಕ್ ಘಟಕಗಳಲ್ಲಿ ಹಾಗೂ ಫೈಬರ್‌ಗ್ಲಾಸ್ ವರ್ಕ್‌ಷಾಪ್‌ಗಳಲ್ಲಿ.



# ಭಾಗ - B

## ಪ್ರಕ್ರಿಯೆಗಳು

1. ಬೀಡಿ ಕಟ್ಟುವಿಕೆ.
2. ಕಾರ್ಪೆಟ್ ಹೆಣಿಗೆ
3. ಸಿಮೆಂಟ್ ತಯಾರಿಕೆ, ಅದನ್ನು ಚೀಲಕ್ಕೆ ತುಂಬುವುದನ್ನೂ ಸೇರಿದಂತೆ
4. ಬಟ್ಟೆಯ ಮೇಲಿನ ಮುದ್ರಣ, ಬಣ್ಣ ಹಾಕುವುದು ಮತ್ತು ಹೆಣಿಗೆ.
5. ಸ್ಫೋಟಕ, ಸಿಡಿಮದ್ದು ಹಾಗೂ ಬೆಂಕಿಪೊಟ್ಟಣ ತಯಾರಿ.
6. ಅಭ್ರಕ ಕತ್ತರಿಸುವುದು, ಸೀಳುವುದು.
7. ಶುದ್ಧ ಅರಗು ತಯಾರಿಕೆ.
8. ಸಾಬೂನು ತಯಾರಿಕೆ
9. ಚರ್ಮ ಹದ ಮಾಡುವುದು.
10. ಉಣ್ಣೆ ಹದ ಮಾಡುವುದು.
11. ಕಟ್ಟಡ ಕಟ್ಟುವುದು ಮತ್ತು ಕಟ್ಟಡ ನಿರ್ಮಾಣ.
12. ಹರಳಿನ ಉತ್ಪನ್ನಗಳ ತಯಾರಿಕೆ.
13. ಬಳಪದ ಪೆನ್ಸಿಲ್ಲುಗಳ ತಯಾರಿಕೆ (ಪ್ಯಾಕ್ ಮಾಡುವುದು ಸೇರಿದಂತೆ)
14. ವಿಷಯುಕ್ತ ಲೋಹಗಳು ಮತ್ತು ವಿಷಯುಕ್ತ ವಸ್ತುಗಳಾದ ಸೀಸ, ಪಾದರಸ, ಮ್ಯಾಂಗನೀಸ್, ಕ್ರೋಮಿಯಂ, ಕ್ಯಾಡ್ಮಿಯಂ, ಬೆನ್‌ಝೀನ್, ಕೀಟನಾಶಕಗಳು ಮತ್ತು ಕಲ್ನಾರುಗಳ ತಯಾರಿಕೆಯ ಪ್ರಕ್ರಿಯೆಗಳು.
15. ಕಾರ್ಖಾನೆಗಳ ಅಧಿನಿಯಮ, 1948 (1948-63)ರ ಅನುಬಂಧ2(cb) ಯಲ್ಲಿ ನಿರ್ವಹಿಸಲಾಗಿರುವ "ಅಪಾಯಕಾರಿ ಪ್ರಕ್ರಿಯೆಗಳು" ಅನುಬಂಧ 87ರ ಅನ್ವಯ ರೂಪಿಸಲಾಗಿರುವ ಶಾಸನದಲ್ಲಿ ಸೂಚಿತವಾಗಿರುವ "ಅಪಾಯಕಾರಿ ಕಾರ್ಯಾಚರಣೆಗಳು".
16. ಕಾರ್ಖಾನೆಗಳ ಅಧಿನಿಯಮ, 1948 (1948-63ರ ಅನುಬಂಧ 2(k) (iv)ರಲ್ಲಿ ನಿರ್ವಹಿಸಲ್ಪಟ್ಟಿರುವಂತೆ.
17. ಗೇರು ಹಣ್ಣಿನಿಂದ ಬೀಜ ಬೇರ್ಪಡಿಸುವಿಕೆ, ಗೇರು ಬೀಜದ ಸಿಪ್ಪೆ ಸುಲಿಯುವಿಕೆ ಹಾಗೂ ಸಂಸ್ಕರಣೆ.
18. ಅಗರಬತ್ತಿ ತಯಾರಿಕೆ.
19. ಇಲೆಕ್ಟ್ರಾನಿಕ್ ಉದ್ದಿಮೆಗಳಲ್ಲಿ ಬೆಸುಗೆಯ ಕೆಲಸಗಳು.
20. ಬೆಸುಗೆ, ಲೇತ್ ಕೆಲಸ, ನೆಗ್ಗಿಸುವುದು ಮತ್ತು ಬಣ್ಣ ಬಳಿಯುವಂತಹ ಸಂಬಂಧಪಟ್ಟ ಇತರ ಕೆಲಸಗಳು ಸೇರಿದಂತೆ ಮೋಟಾರು ವಾಹನಗಳ ದುರಸ್ತಿ ಹಾಗೂ ನಿರ್ವಹಣೆ.
21. ಇಟ್ಟಿಗೆ ಗೂಡು ಹಾಗೂ ಮಾಡಿನ ಹೆಂಚು ನಿರ್ಮಾಣ ಘಟಕಗಳು.
22. ಹತ್ತಿ ಬೀಜ ಬೇರ್ಪಡಿಸುವುದು ಹಾಗೂ ಸಂಸ್ಕರಣೆ ಮತ್ತು ಒಳ ಉಡುಪುಗಳಂತಹ ಸರಕುಗಳ ಉತ್ಪಾದನೆ.
23. ಶುದ್ಧಿಕಾರಕ ಉತ್ಪನ್ನಗಳ ತಯಾರಿಕೆ.
24. ಫೇಬ್ರಿಕೇಷನ್ ಕಾರ್ಯಾಗಾರಗಳು (ಕಬ್ಬಿಣ ಮತ್ತು ಕಬ್ಬಿಣವಲ್ಲದ).
25. ರತ್ನಗಳನ್ನು ಕತ್ತರಿಸುವುದು ಹಾಗೂ ಮೆರುಗು ನೀಡುವುದು.

26. ಕ್ರೋಮೈಟ್ ಹಾಗೂ ಮ್ಯಾಂಗನೀಸ್ ಅದಿರುಗಳ ನಿರ್ವಹಣೆ.

27. ಸೆಣಬು ನೇಯ್ಗೆಯ ಉತ್ಪನ್ನ ಹಾಗೂ ತೆಂಗಿನ ನಾರಿನ ತಯಾರಿಕೆ.

28. ಸುಣ್ಣದ ಕಲ್ಲಿನ ಆವಿಗೆ ಹಾಗೂ ತೆಂಗಿನ ನಾರಿನ ತಯಾರಿಕೆ.

29. ಬೀಗದ ತಯಾರಿಕೆ.

30. ಸೀಸಕ್ಕೆ ಒಡ್ಡಿಕೊಳ್ಳಬೇಕಾಗುವಂತಹ ತಯಾರಿಕಾ ಪ್ರಕ್ರಿಯೆಗಳು -ಪ್ರಥಮ ಹಾಗೂ ದ್ವಿತೀಯ ಹಂತಗಳಲ್ಲಿ ಲೋಹ ಕರಗಿಸಿ ಅದಿರು ತೆಗೆಯುವುದು, ಸೀಸದ ಬೆಸುಗೆ ಹಾಗೂ ಕತ್ತರಿಸುವಿಕೆ - ಬಣ್ಣ ಲೇಪಿತ ಲೋಹದ ನಿರ್ಮಾಣ, ಆರ್ಗ್ಯಾನಿಕ್ ಸಿಲಿಕೇಟ್, ಪಾಲಿವಿನೈಲ್ ಕ್ಲೋರೈಡ್‌ನ ಬೆಸುಗೆ ಅಥವಾ ವಿದ್ಯುಲ್ಲೇಪನ, ಹರಳು ಗಾಜಿನ ಮುದ್ದೆಯ ಮಿಶ್ರಣ ಮಾಡುವುದು (ಕೈಯಲ್ಲಿ), ಸೀಸದ ಬಣ್ಣವನ್ನು ಕೆರೆದು ತೆಗೆಯುವುದು, ಬಣ್ಣ ನೀಡುವ ಕಾರ್ಯಾಗಾರಗಳಲ್ಲಿ ಸೀಸವನ್ನು ಸುಡುವುದು ಸೀಸದ ಗಣಿಗಾರಿಕೆ, ಸೀಸದ ಪೈಪುಗಳ ಕೆಲಸ, ಕೇಬಲ್

ಮಾಡುವುದು, ವೈರಿಂಗ್ ಪೇಟೆಂಟಿಂಗ್, ಸೀಸದ ಎರಕ ಹೊಯ್ಯುವುದು, ಮುದ್ರಣಾಲಯಗಳಲ್ಲಿ ಸೀಸದ ಮೊಳೆಯ ಕೆಲಸ ಮಾಡುವುದು, ಕಾರಿನ ಬಿಡಿ ಭಾಗಗಳ ಜೋಡಣೆ, ಗುಂಡು ತಯಾರಿಕೆ, ಗಾಜಿನ ವಸ್ತುಗಳ ತಯಾರಿಕೆ, ಉಬ್ಬಿಸುವಿಕೆ.

31. ಸಿಮೆಂಟಿನ ಕೊಳವೆಗಳ ತಯಾರಿಕೆ, ಸಿಮೆಂಟಿನ ಉತ್ಪನ್ನಗಳು ಹಾಗೂ ಇತರ ಸಂಬಂಧಿತ ಕೆಲಸಗಳು.

32. ಗಾಜಿನ ತಯಾರಿಕೆ, ಬಳೆಗಳೂ ಸೇರಿದಂತೆ ಗಾಜಿನ ವಸ್ತುಗಳು, ಫ್ಲೋರೋಸೆಂಟ್ ಟ್ಯೂಬುಗಳು, ಬಲ್ಬ್‌ಗಳು ಹಾಗೂ ಇಂತಹುದೇ ಇನ್ನಿತರ ಗಾಜಿನ ಉತ್ಪನ್ನಗಳು.

33. ಬಣ್ಣಗಳ ಮತ್ತು ಬಣ್ಣದ ವಸ್ತುಗಳ ತಯಾರಿಕೆ.

34. ಕೀಟನಾಶಕಗಳ ಹಾಗೂ ಕ್ರಿಮಿನಾಶಕಗಳ ತಯಾರಿಕೆ ಅಥವಾ ನಿರ್ವಹಣೆ.

35. ತುಕ್ಕು ಹಿಡಿಯುವ ಹಾಗೂ ವಿಷಕಾರಕ ಪದಾರ್ಥಗಳ ಸಂಸ್ಕರಣೆ ಹಾಗೂ ನಿರ್ವಹಣೆ.

36. ಉರಿಯುವ ಕಲ್ಲಿದ್ದಲು ಹಾಗೂ ಕಲ್ಲಿದ್ದಲಿನ ಇಟ್ಟಿಗೆಗಳ ತಯಾರಿಕೆ.

37. ಸಿಂಥೆಟಿಕ್ ಸಾಮಗ್ರಿಗಳು, ರಸಾಯನಿಕ ಪದಾರ್ಥಗಳು ಹಾಗೂ ಚರ್ಮದ ವಸ್ತುಗಳಿಗೆ ಒಡ್ಡಿಕೊಳ್ಳುವ ರೀತಿಯನ್ನು ಒಳಗೊಂಡಂತೆ ಆಟೋಟದ ಸಾಮಗ್ರಿಗಳ ತಯಾರಿಕೆ.

38. ಫೈಬರ್ ಗ್ಲಾಸ್ ಮತ್ತು ಪ್ಲಾಸ್ಟಿಕ್‌ನ ಎರಕ ಹಾಗೂ ಸಂಸ್ಕರಣೆ.

39. ತೈಲ ಸುರಿಯುವಿಕೆ ಮತ್ತು ತೈಲ ಸುದ್ದಿ ಕರಣಾಗಾರ.

40. ಕಾಗದದ ತಯಾರಿಕೆ.

41. ಕುಂಬಾರಿಕೆ ಮತ್ತು ಸಿರ್ಯಾಮಿಕ್ ಉದ್ಯಮ.

42. ಹೊಳಪು ನೀಡುವುದು, ಕತ್ತರಿಸುವುದು, ಬೆಸುಗೆ ಹಾಕುವುದು ಸೇರಿದಂತೆ ಎಲ್ಲಾ ವಿಧದ ಹಿತ್ತಾಳೆಯ ಸರಕುಗಳ ತಯಾರಿಕೆ.

43. ಟ್ರ್ಯಾಕ್ಟರುಗಳು, ಒಕ್ಕುವ ಹಾಗೂ ಕೊಯ್ಲಿನ ಯಂತ್ರಗಳನ್ನು ಬಳಸಿ ನಡೆಸುವ ವ್ಯವಸಾಯದ ಪ್ರಕ್ರಿಯೆಗಳು ಹಾಗೂ ಹುಲ್ಲು ಅಥವಾ ದಂಟು ಕತ್ತರಿಸುವಿಕೆ.

44. ಮರದ ಕಾರ್ಖಾನೆಯಲ್ಲಿ ಎಲ್ಲಾ ಪ್ರಕ್ರಿಯೆಗಳು.

45. ರೇಷ್ಮೆ ಸಂಸ್ಕರಣೆ.

46. ಚರ್ಮದ ಉತ್ಪನ್ನಗಳ ತಯಾರಿಕೆಗಾಗಿ ಚರ್ಮ ಸುಲಿಯುವಿಕೆ, ಬಣ್ಣ ನೀಡುವಿಕೆಯ ಕೆಲಸಗಳು.

47. ಕಲ್ಲು ಒಡೆಯುವುದು ಹಾಗೂ ಜಲ್ಲಿ ಒಡೆಯುವುದು.

48. ತಂಬಾಕು ತಯಾರಿಕೆ, ಹೊಗೆಸೊಪ್ಪು ಪಟ್ಟೆ ಮಾಡುವುದು ಮತ್ತು ಯಾವುದೇ ಬಗೆಯಲ್ಲಿ ತಂಬಾಕು ಸೊಪ್ಪಿನ ನಿರ್ವಹಣೆ ಸೇರಿದಂತೆ ತಂಬಾಕು ಸಂಸ್ಕರಣೆ.

49. ಟಯರ್ ತಯಾರಿಕೆ, ದುರಸ್ತಿ, ರಿಟ್ರೇಡಿಂಗ್ ಮತ್ತು ಗ್ರಾಫೈಟ್ ಸಂಸ್ಕರಣೆ.

50. ಪಾತ್ರೆಗಳ ತಯಾರಿಕೆ, ಹೊಳಪು ನೀಡುವಿಕೆ ಹಾಗೂ ಲೋಹಕ್ಕೆ ಮೆರುಗು ನೀಡುವಿಕೆ.

51. ಜರಿ ತಯಾರಿಕೆ (ಎಲ್ಲಾ ಪ್ರಕ್ರಿಯೆಗಳು).

(i) ಅಂಶ.

(2) ಈ ಕೆಳಗೆ ಸೂಚಿಸಿರುವಂತೆ ಬದಲಾಗುತ್ತದೆ.

(3) ಪೂರ್ವ ತಯಾರಿ ಹಾಗೂ ತತ್ಸಂಬಂಧಿತ ಪ್ರಕ್ರಿಯೆಗಳೆಲ್ಲವನ್ನೂ ಒಳಗೊಂಡಂತೆ ಕಾರ್ಪೆಟ್ ಹೆಣಿಗೆ.

(ii) ಅಂಶ.

(4) ಈ ಕೆಳಗೆ ಸೂಚಿಸಿರುವಂತೆ ಬದಲಾಗುತ್ತದೆ.

(4) ಪೂರ್ವ ತಯಾರಿ ಹಾಗೂ ತತ್ಸಂಬಂಧಿತ ಪ್ರಕ್ರಿಯೆಗಳೆಲ್ಲವನ್ನೂ ಒಳಗೊಂಡಂತೆ ಬಟ್ಟೆಯ ಮೇಲಿನ ಮುದ್ರಣ, ಬಣ್ಣ ಹಾಕುವಿಕೆ ಹಾಗೂ ನೇಯ್ಗೆ.

## 23ನೇ ಮೇ 2002ರ ಘೋಷಣೆ

52. ವಿದ್ಯುಲ್ಲೇಪನ (ವಿದ್ಯುತ್ ಬಳಕೆಯ ಮುಖಾಂತರ ಲೋಹಗಳಿಗೆ ಚಿನ್ನ ಅಥವಾ ಬೆಳ್ಳಿಯ ಲೇಪನ ನೀಡುವುದು.)

53. ಗ್ರಾಫೈಟ್ ಪುಡಿ ಮಾಡುವುದು ಮತ್ತು ತತ್ಸಂಬಂಧಿತ ಕೆಲಸಗಳು.

54. ಲೋಹಗಳಿಗೆ ಸಾಣೆ ಹಿಡಿಯುವುದು ಅಥವಾ ಮೆರುಗು ನೀಡುವುದು.

55. ವಜ್ರಗಳನ್ನು ಕತ್ತರಿಸುವುದು ಮತ್ತು ಹೊಳಪು ನೀಡುವುದು.

56. ಗಣಿಗಳಿಂದ ಬಳಪ ತೆಗೆಯುವುದು.

57. ಚಿಂದಿ ಆಯುವುದು ಮತ್ತು ಬೀದಿ ಗುಡಿಸುವುದು.



## 1950 ಭಾರತದ ಸಂವಿಧಾನ ಮತ್ತು ಮಕ್ಕಳು

ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಅದು ನಡೆಯದಂತೆ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ನಮ್ಮ ಸಂವಿಧಾನ ಏನೂ ಹೇಳಿಲ್ಲವೇ ಎಂಬ ಮಾತು, ಯೋಚನೆ ಸಹಜ. ನಮ್ಮ ಸಂವಿಧಾನ ಕೂಡ ಹಲವಾರು ವಿಚಾರಗಳನ್ನು ಹೇಳಿದೆ.


ಸಂವಿಧಾನ ಪರಿಚ್ಛೇದ 21 : ಭಾರತದಲ್ಲಿ ಹುಟ್ಟಿದ ಎಲ್ಲಾ ಮಕ್ಕಳಿಗೆ, ನಾಗರೀಕರಿಗೆ ಬದುಕುವ ಹಕ್ಕು ನೀಡಬೇಕು.

ಸಂವಿಧಾನ ಪರಿಚ್ಛೇದ 21A : 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ "ಶಿಕ್ಷಣ ಮೂಲಭೂತ ಹಕ್ಕು".

ಸಂವಿಧಾನ ಪರಿಚ್ಛೇದ 24 : 14ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದನ್ನು ನಿಷೇಧಿಸಲಾಗಿದೆ.

ಸಂವಿಧಾನ ಪರಿಚ್ಛೇದ 39 : (ಇ.ಎಫ್) ಪೋಷಕರು ಕುಟುಂಬ ನಡೆಸಲು ಮಕ್ಕಳನ್ನು ಬಳಸಬಾರದು ಮಕ್ಕಳಿಗೆ ಅವರ ಬಾಲ್ಯ, ಆರೋಗ್ಯ, ಸ್ವಾತಂತ್ರ್ಯ,ಘನತೆ ಮತ್ತು ಯೌವನವನ್ನು ರಕ್ಷಿಸಿಕೊಳ್ಳಲು ಅವಕಾಶ ಮತ್ತು ಅನುಕೂಲತೆ ಗಳನ್ನು ಕಲ್ಪಿಸಿಕೊಳ್ಳಲು ಅವಕಾಶ ಮತ್ತು ಅನುಕೂಲತೆಗಳನ್ನು ಕಲ್ಪಿಸಬೇಕು, ಅವರನ್ನು ಶೋಷಣೆಯಿಂದ ಮುಕ್ತರನ್ನಾಗಿಸಬೇಕು.

ಸಂವಿಧಾನ ಪರಿಚ್ಛೇದ 45 : "ಉಚಿತ ಮತ್ತು ಕಡ್ಡಾಯ ಶಿಕ್ಷಣ" ಈ ಪರಿಚ್ಛೇದದ ಪ್ರಕಾರ ಭಾರತದಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ 14 ವರ್ಷದವರೆಗೆ ಉಚಿತವಾಗಿ ಕಡ್ಡಾಯವಾಗಿ ಶಿಕ್ಷಣ ನೀಡಬೇಕು.



## 1996 ಡಿಸೆಂಬರ್ 10ರ ಸುಪ್ರೀಂ ಕೋರ್ಟಿನ ಐತಿಹಾಸಿಕ ತೀರ್ಪು


ತಮಿಳುನಾಡಿನ ಶಿವಕಾಶಿಯ ಬೆಂಕಿ ಪೊಟ್ಟಣ ಕಾರ್ಖಾನೆಯಲ್ಲಿ ದುಡಿಯುವ ೪೦ ಮಕ್ಕಳನ್ನು ಸಂಜೆ ತುಂಬಿಕೊಂಡು ಹೋಗುತ್ತಿದ್ದ "ಟ್ರಕ್" ಅಪಘಾತಕ್ಕೀಡಾಯಿತು. ಈ ದುರ್ಘಟನೆಯ ಆಧಾರದ ಮೇಲೆ ತಮಿಳುನಾಡಿನ ಹಿರಿಯ ಅನುಭವಿ ವಕೀಲರಾದ ಶ್ರೀ ಎಂ. ಸಿ. ಮೆಹತಾ ಅವರು ತಮಿಳುನಾಡು ಸರ್ಕಾರದ ವಿರುದ್ಧ ಮೊಕದ್ದಮೆ ಹೂಡಿದರು. (ರಿಟ್ ಅರ್ಜಿ - No. 465 - 1986). ಸುಮಾರು 10 ವರ್ಷಗಳ ವಾದ ವಿವಾದದ ನಂತರ ಡಿಸೆಂಬರ್ 10, 1996 ರಂದು ಸುಪ್ರೀಂ ಕೋರ್ಟು ಒಂದು ಐತಿಹಾಸಿಕ ತೀರ್ಪು ನೀಡಿತು.

ಅದರ ಮುಖ್ಯಾಂಶಗಳು :


☞ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ "ಬಾಲ ಕಾರ್ಮಿಕರ ಪುನರ್ವಸತಿ" ಮತ್ತು ಕಲ್ಯಾಣನಿಧಿ ಸ್ಥಾಪನೆ

☞ 14 ವರ್ಷದ ಒಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

☞ ಒಂದು ವೇಳೆ ದುಡಿಸಿದಲ್ಲಿ ಮಾಲೀಕರು ರೂ. 20,000 ದಂಡವನ್ನು ಬಾಲಕಾರ್ಮಿಕನ/ಳ ಕುಟುಂಬಕ್ಕೆ ತೆರಬೇಕು.



- ☞ ಹಾಗೂ ಸರ್ಕಾರವು ರೂ. 5,000 ದಂಡ ತೆರಬೇಕು. ಒಂದು ವೇಳೆ ಸರ್ಕಾರಕ್ಕೆ ರೂ. 5,000 ದಂಡ ತೆರಲು ಆಗದಿದ್ದಲ್ಲಿ ಸರ್ಕಾರ ಆ ಕುಟುಂಬದ ಒಬ್ಬ ನಿರುದ್ಯೋಗಿ ಪ್ರೌಢನಿಗೆ ಉದ್ಯೋಗ ನೀಡಬೇಕು.
- ☞ ಒಟ್ಟು ರೂ. 20,000 ಅಥವಾ 25,000ವನ್ನು "ಜಿಲ್ಲಾಧಿಕಾರಿಗಳ ಕಲ್ಯಾಣ ನಿಧಿ"ಯಲ್ಲಿ ಠೇವಣಿ ಇಟ್ಟು ಅದರ ಬಡ್ಡಿಯಲ್ಲಿ ಆ ಮಗುವಿಗೆ ಶಿಕ್ಷಣ ನೀಡಬೇಕು.
- ☞ ಪುನರ್ವಸತಿ ಮಾಡಿದ ಮಕ್ಕಳ ಶಿಕ್ಷಣಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಶಿಕ್ಷಣ ಇಲಾಖೆಯ ಜವಾಬ್ದಾರಿಯಾಗಿದೆ.




## 1997, ಜೂನ್ 6ರ ಕರ್ನಾಟಕ ಹೈಕೋರ್ಟ್ಟು ತೀರ್ಪು



1996, ಡಿಸೆಂಬರ್ 30 ರಂದು CACL-K ಸಂಘಟಿಸಿದ "ಸಾರ್ವಜನಿಕ ಫಿರ್ಯಾದು" ಕಾರ್ಯಕ್ರಮದ ಪತ್ರಿಕಾ ವರದಿಯ ಆಧಾರದ ಮೇಲೆ ಬೆಂಗಳೂರಿನ ವಕೀಲರೊಬ್ಬರು ಕರ್ನಾಟಕ ಹೈ ಕೋರ್ಟಿನಲ್ಲಿ ಸಾರ್ವಜನಿಕ ಮೊಕದ್ದಮೆ ಹೂಡಿದರು. ನಂತರ CACL-Kಗೆ ಈ ಮೊಕದ್ದಮೆಯನ್ನು ಮುಂದುವರಿಸುವಂತೆ ಕರ್ನಾಟಕ ಹೈಕೋರ್ಟು ಆದೇಶಿಸಿದ ಪ್ರಕಾರ, ಸುಮಾರು 6 ತಿಂಗಳ ಕಾಲ CACL-K ಫಿರ್ಯಾದಿನಲ್ಲಿ ಕೋರ್ಟಿಗೆ ಎಲ್ಲಾ ವಿಚಾರ, ವಿಷಯಗಳನ್ನು ಮಂಡಿಸಿದ ನಂತರ ದಿನಾಂಕ 6-6-1997 ರಂದು ಕರ್ನಾಟಕ ಹೈ ಕೋರ್ಟು ಮೊಟ್ಟ ಮೊದಲ ಬಾರಿಗೆ ತೀರ್ಪು ನೀಡಿತು. ಅದರ ಮುಖ್ಯಾಂಶಗಳು :

- 10 ವರ್ಷದ ಒಳಗಿನ ಯಾವುದೇ ಮಗುವನ್ನು ಯಾವುದೇ ಕ್ಷೇತ್ರದಲ್ಲಿ ಯಾವುದೇ ಕಾರಣಕ್ಕೂ ದುಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
- ರೇಷ್ಮೆ ಮತ್ತು ಹತ್ತಿ ಉದ್ಯಮಗಳು ಮಕ್ಕಳಿಗೆ ಅಪಾಯಕಾರಿ ಎಂದು ಪರಿಗಣಿಸಲಾಗಿದೆ.
- 14 ವರ್ಷದ ಒಳಗಿನ ಎಲ್ಲಾ ಮಕ್ಕಳು "ಮುಖ್ಯ ಶಿಕ್ಷಣ ವಾಹಿನಿಯಲ್ಲಿ" ಕಲಿಯುತ್ತಿರಬೇಕು.
- ತಕ್ಷಣ ರೇಷ್ಮೆ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಕ್ಕಳ ಸಮೀಕ್ಷೆ ನಡೆಸಿ ಅವರ ಪುನರ್ವಸತಿಗೆ ಕಾರ್ಮಿಕ ಇಲಾಖೆ ಮುಂದಿನ ಕ್ರಮ ಕೈಗೊಳ್ಳಬೇಕು.
- ಮನೆ ಬಿಟ್ಟ ಮಕ್ಕಳು ಮತ್ತು ಬೀದಿ ಮಕ್ಕಳು ಬೀದಿಯಲ್ಲಿರದಂತೆ ಕರ್ನಾಟಕ ಸರ್ಕಾರ ಅವರ ಶಿಕ್ಷಣಕ್ಕೆ, ಪುನರ್ವಸತಿಗೆ ಸೂಕ್ತ ವ್ಯವಸ್ಥೆ ಮಾಡಬೇಕು.



ಮಕ್ಕಳ ಹಕ್ಕುಗಳಿಗಾಗಿ ಸಾಕಷ್ಟು ಚಿಂತನೆಗಳು, ಸಮಾವೇಶಗಳು ನಡೆದಿವೆ, ಎಲ್ಲದರಲ್ಲೂ ಮಕ್ಕಳ ಹಕ್ಕು, ಬಾಲ್ಯ, ಶಿಕ್ಷಣಗಳ ಬಗ್ಗೆ ಕೆಲವು ಚಿಂತನೆಗಳು ಹೀಗಿವೆ:

1924 : ಮಕ್ಕಳ ಹಕ್ಕುಗಳ ಜಾಗತಿಕ ಘೋಷಣೆ

1948 : ಮಾನವ ಹಕ್ಕುಗಳ ಜಾಗತಿಕ ಘೋಷಣೆ (ಮಕ್ಕಳ ಹಕ್ಕುಗಳನ್ನು ಇದು ಗುರುತಿಸಿದೆ)

1959 : ವಿಶ್ವ ಸಂಸ್ಥೆಯ ಮಹಾ ಸಭೆಯಲ್ಲಿ ಮಕ್ಕಳ ಹಕ್ಕುಗಳಿಗೆ ಅಂಗೀಕಾರ

1989 : (ನವೆಂಬರ್ 20) ಒಡಂಬಡಿಕೆಯನ್ನು ವಿಶ್ವಸಂಸ್ಥೆಯ ಮಹಾಸಭೆ ಅಂಗೀಕರಿಸಿ ಘೋಷಣೆ

1992 : ವಿಶ್ವಸಂಸ್ಥೆಯ ಘೋಷಣೆಗೆ ಭಾರತ ಸರ್ಕಾರದ ಒಪ್ಪಿಗೆ

ಇವುಗಳಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಬಗ್ಗೆ ಸಾಕಷ್ಟು ಚಿಂತನೆಗಳು ನಡೆದವು ಜನರನ್ನು ಎಚ್ಚರಿಸುವ ಸಲುವಾಗಿ ಒಂದಷ್ಟು ದಿನಗಳನ್ನು ನಿಗದಿ ಮಾಡಲಾಯಿತು.

ಏಪ್ರಿಲ್ - 30 -

ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ

ಜೂನ್ - 12 -

ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ದಿನ

ನವೆಂಬರ್ - 12 -

ಭಾರತೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ ದಿನ

ನವೆಂಬರ್ - 14 -


ಮಕ್ಕಳ ದಿನಾಚರಣೆ

ನವೆಂಬರ್ - 20 -

ಜಾಗತಿಕ ಮಕ್ಕಳ ಹಕ್ಕುಗಳ ಒಡಂಬಡಿಕೆ ದಿನ

ಡಿಸೆಂಬರ್ - 10 -

ಜಾಗತಿಕ ಮಾನವ ಹಕ್ಕುಗಳ ದಿನ.



| ಕೆಲಸ / ವೃತ್ತಿ | | ಬರುವ ರೋಗಗಳು |
|---|---|---|
| 1. ಬೀಡಿ ಉದ್ದಿಮೆ | : | ಕ್ಷಯ, ಶ್ವಾಸಕೋಶ ಸಂಬಂಧಿತ ರೋಗಗಳು, ಗಂಟಲು ರೋಗ |
| 2. ಗಾಜು ಉದ್ದಿಮೆ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗಗಳು, ಕಣ್ಣಿನ ರೋಗಗಳು, ಉರಿತ, ಕಣ್ಣುಬೇನೆ. ಸುಟ್ಟ ಗಾಯಗಳು. |
| 3. ಕೈಮಗ್ಗ ಮತ್ತು ರತ್ನಗಂಬಳಿ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗಗಳು, ಬೆನ್ನು ಮೂಳೆ ರೋಗ. |
| 4. ಜರಿ ಮತ್ತು ಕಸೂತಿ | : | ಕಣ್ಣುಬೇನೆ, ಕಣ್ಣಿನ ಎಲ್ಲಾ ಕಾಯಿಲೆಗಳು |
| 5. ವಜ್ರ ಮತ್ತು ಹರಳು ತಿದ್ದುವುದು | : | ಕಣ್ಣಿನ ತೊಂದರೆಗಳು, ಗಾಯಗಳು. |
| 6. ಕಟ್ಟಡ ನಿರ್ಮಾಣ | : | ಅಪಘಾತಗಳು, ಬೆಳವಣಿಗೆಗೆ ಅಡ್ಡಿ. |
| 7. ಚಿಂದಿ ಆಯುವುದು | : | ಚರ್ಮವ್ಯಾಧಿಗಳು, ಸಾಂಕ್ರಾಮಿಕ ರೋಗಗಳು, ಧನುರ್ವಾಯು ಹಾಗೂ ಕೆಟ್ಟ ಚಟಗಳು. |
| 8. ಕುಂಬಾರಿಕೆ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗಗಳು |
| 9. ಗಣಿಗಳು, ಕಲ್ಲು ಸ್ಲೇಟು ಗಣಿಗಳು | : | ಸಿಲಿಕೋಸಿಸ್ (ಶ್ವಾಸಕೋಶದ ಎಲ್ಲಾ ಕಾಯಿಲೆ), ಕುಂಠಿತ ಬೆಳವಣಿಗೆ, ಕಣ್ಣುಬೇನೆ, ನಡುನೋವು, ಬೆನ್ನು ಹುರಿ ಕಾಯಿಲೆ |
| 10. ಲೈಂಗಿಕ ಚಟುವಟಿಕೆಗಳು | : | ಲೈಂಗಿಕ ರೋಗಗಳು, ಏಡ್ಸ್ |
| 11. ವ್ಯವಸಾಯ | : | ಕೀಟನಾಶಕಗಳು ಮತ್ತು ಫಾರ್ಮ್‌ಯಂತ್ರಗಳಿಂದ ಹಾನಿಗಳು, ಜ್ವರ, ಇತರೇ ಸಾಂಕ್ರಾಮಿಕ ರೋಗಗಳು. |
| 12. ರೇಷ್ಮೆ ಹುರಿ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗ, ಗರ್ಭಕೋಶದ ಕುಂಠಿತ ಬೆಳವಣಿಗೆ. |
| 13. ಮಂಡಕ್ಕಿ ಭಟ್ಟಿ | : | ಅಸ್ತಮಾ, ಶ್ವಾಸಕೋಶ ಸಂಬಂಧಿತ ರೋಗ, ಗಂಟಲು ರೋಗ, ಕಣ್ಣುಬೇನೆ, ಚರ್ಮ ವ್ಯಾಧಿ, ಅಪಘಾತ. |

ಈ ರೀತಿ ಲಕ್ಷಾಂತರ ಕ್ಷೇತ್ರಗಳಲ್ಲಿ ಕೋಟಿಗಟ್ಟಲೆ ಮಕ್ಕಳು ದುಡಿಯುತ್ತಾ ಬೇರೆ ಬೇರೆ ರೋಗಗಳಿಗೆ ಬಲಿಯಾಗುತ್ತಿದ್ದಾರೆ.

# ಶಾಲೆಗಳ ಮತ್ತು SDMCಯ ಪಾತ್ರ

1. ತಮ್ಮ ಗ್ರಾಮದಲ್ಲಿರುವ ಎಲ್ಲಾ 14 ವರ್ಷದೊಳಗಿನ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು.
2. 10ನೇ ಕ್ಲಾಸು ತನಕ ಯಾವುದೇ ಮಕ್ಕಳು ಶಾಲೆ ಬಿಡದಂತೆ ನೋಡುವುದು.
3. ಶಾಲೆಗಳನ್ನು ಮಕ್ಕಳಿಗೆ ಆಕರ್ಷಿತವಾಗಿರುವಂತೆ ಮಾಡುವುದು.
4. ಮಕ್ಕಳ ಹಕ್ಕುಗಳ ಆಧಾರವಾಗಿಟ್ಟು ಶಾಲೆಗಳಲ್ಲಿ ಮಕ್ಕಳನ್ನು ನೋಡುವುದು.
5. ಮಕ್ಕಳಿಗೆ ಹಿತವಾಗುವ ಹಾಗೆ ಪಾಠ ಮಾಡುವುದು.
6. ಶಾಲೆಗಳಲ್ಲಿ "ಮಕ್ಕಳ ಹಕ್ಕುಗಳ" ವೇದಿಕೆಯನ್ನು ತಯಾರಿಸುವುದು.
7. ತಮ್ಮ ಗ್ರಾಮವನ್ನು ಬಾಲ ಕಾರ್ಮಿಕ ರಹಿತ ಗ್ರಾಮವನ್ನಾಗಿ ಮಾಡುವುದು.

# ಗ್ರಾಮ ಪಂಚಾಯಿತಿಯ ಪಾತ್ರ

1. ತಮ್ಮ ಗ್ರಾಮದಲ್ಲಿರುವ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ನೋಡುವುದು.
2. "ಶಿಕ್ಷಣ"ದ ಜವಾಬ್ದಾರಿಯನ್ನು ಸರಿಯಾಗಿ ವಹಿಸಿಕೊಳ್ಳುವುದು.
3. 10ನೇ ತರಗತಿವರೆಗೆ ಯಾವುದೇ ಮಕ್ಕಳು ಶಾಲೆ ಬಿಡದಂತೆ ಪಂಚಾಯಿತಿ ಸದಸ್ಯರು ಜವಾಬ್ದಾರಿವಹಿಸಿಕೊಳ್ಳುವುದು.
4. "ಗ್ರಾಮ ಸಭೆಗಳಲ್ಲಿ" "ಶಾಲೆ ಬಿಟ್ಟ ಮಕ್ಕಳ ಬಗ್ಗೆ" "ಬಾಲ ಕಾರ್ಮಿಕ ಪದ್ಧತಿ" ಬಗ್ಗೆ ಚರ್ಚಿಸಿ ಅವರ ಬಿಡುಗಡೆ ಮತ್ತು ಶಾಲಾ ದಾಖಲಾತಿ ಬಗ್ಗೆ ಚರ್ಚಿಸುವುದು.
5. ಬಾಲಕಾರ್ಮಿಕ ರಹಿತ ಗ್ರಾಮ ಪಂಚಾಯತಿಯನ್ನಾಗಿ ಮಾಡುವುದು.



## ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ನೀವೇನು ಮಾಡಬಹುದು

- ಯಾವುದೇ ಮಕ್ಕಳನ್ನು ದುಡಿಸಬೇಡಿ, ದುಡಿತಕ್ಕೆ ಕಳುಹಿಸಬೇಡಿ.
- ಪೋಷಕರೇ - ಎಲ್ಲಾ ಮಕ್ಕಳಂತೆ ನಿಮ್ಮ ಮಕ್ಕಳು ಸ್ವಾಭಿಮಾನದಿಂದ ಶಾಲೆಯಲ್ಲಿ ಇರಲಿ - ಶಾಲೆಗೆ ಸೇರಿಸಿರಿ.
- ಮಾಲೀಕರೇ - ನಿಮ್ಮ ಮಕ್ಕಳಂತೆ ಎಲ್ಲಾ ಮಕ್ಕಳು ಶಿಕ್ಷಣ ಪಡೆಯಲಿ ಪ್ರೋತ್ಸಾಹಿಸಿ.
- ಮಕ್ಕಳು Vote Bank ಅಲ್ಲವೆಂದು ನಿರ್ಲಕ್ಷಿಸಬೇಡಿ ಅವರ ಶಿಕ್ಷಣಕ್ಕೆ ಪ್ರೋತ್ಸಾಹಿಸಿ.
- ಮಕ್ಕಳ ದುಡಿಮೆ, ಹಿಂಸೆ, ದೌರ್ಜನ್ಯ, ಲೈಂಗಿಕ ಹಿಂಸೆಯನ್ನು ಖಂಡಿಸಿ, ವಿರೋಧಿಸಿ.
- 14 ವರ್ಷದೊಳಗಿನ ಮಕ್ಕಳನ್ನು ಶಾಲೆಯಲ್ಲಿ ಇರುವಂತೆ ಮಾಡಿ.
- ಮಕ್ಕಳ ಹಕ್ಕು, ಕಾನೂನು, ಶಿಕ್ಷಣದ ಮಹತ್ವವನ್ನು ಪ್ರಚಾರ ಮಾಡಿ, ನಿಮ್ಮ ಪರಿಸರದಲ್ಲಿರುವ ಎಲ್ಲಾ ಮಕ್ಕಳು ಶಾಲೆಯಲ್ಲಿ ಇರುವಂತೆ ಮಾಡಿ.
- ಯಾವುದೇ ಮಗು ದುಡಿಯುವುದನ್ನು, ಬೀದಿಯಲ್ಲಿ ಇರುವುದನ್ನು ಕಂಡರೆ ಪುನರ್ವಸತಿಗೆ, ಬಿಡುಗಡೆಗೆ ಪ್ರಯತ್ನಿಸಿ ಸ್ಥಳೀಯ ಇಲಾಖೆಗಳಿಗೆ ಮಾಹಿತಿ ನೀಡಿ, ಮಾಲೀಕರ ಮನಃಪರಿವರ್ತಿಸಿ.
- ದುಡಿಮೆಗೆ, ತುಳಿತಕ್ಕೆ ಒಳಗಾದ ಮಕ್ಕಳನ್ನು ಕೈಬೀಸಿ ಕರೆದು ಬಾಲ ಕಾರ್ಮಿಕ ಪದ್ಧತಿ ತೊಲಗಲಿ ಎಂದು ಧ್ವನಿ ಎತ್ತಿ ಕೂಗಿ.



# ಎಚ್ಚರಿಕೆ

**ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಸರ್ಕಾರಿ ನೌಕರರು 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕೆಲಸಕ್ಕೆ ಇಟ್ಟುಕೊಳ್ಳುವಂತಿಲ್ಲ**

**ಕರ್ನಾಟಕ ಸರ್ಕಾರ**

ಸಂ : ಡಿಪಿಎಆರ್ 3 ಎಸ್ ಆರ್ ಸಿ 97


ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು
ದಿನಾಂಕ 11-11-1997

## ಪ್ರಕಟಣೆ

ಕರ್ನಾಟಕ ನಾಗರಿಕ ಸೇವಾ (ನಡವಳಿಕೆ) ಕಾಯ್ದೆ 1996ರಲ್ಲಿ ಬದಲಾವಣೆ ತರುವ ಉದ್ದೇಶದೊಂದಿಗೆ, ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990 ರ 14) ರ ಪರಿಚ್ಛೇದ (2) ರ ಪ್ರಕಾರ ಕೆಳಕಂಡ ಕಾನೂನುಗಳ ಕರಡು ಪ್ರತಿಯನ್ನು ದಿನಾಂಕ 25-09-1997ರ ಕರ್ನಾಟಕ ಗೆಜೆಟ್‌ನ IVನೇ ಭಾಗ ಪರಿಚ್ಛೇದ 2 (c) (1) ರಲ್ಲಿ ಸಂ. ಡಿ.ಪಿ.ಎ.ಆರ್. 3 ಎಸ್.ಆರ್.ಸಿ. 97 ದಿನಾಂಕ 21-07-1997 ರ ಅಧಿಕೃತ ಪ್ರಕಟಣೆಯಲ್ಲಿ ಪ್ರಕಟಿಸಲಾಗಿದ್ದು ಇದರಿಂದ ತೊಂದರೆಗೊಳಗಾಗುವ ಸಾಧ್ಯತೆಯಿರುವ ವ್ಯಕ್ತಿಗಳಿಂದ ತಮ್ಮ ಆಕ್ಷೇಪಣೆಗಳನ್ನು / ಸಲಹೆಗಳನ್ನು ಇದು ಪ್ರಕಟಗೊಂಡು 30 ದಿನಗಳೊಳಗಾಗಿ ಹಾಜರು ಪಡಿಸಲು ಆಹ್ವಾನಿಸಲಾಗಿದೆ.

ಮೇಲೆ ಸೂಚಿಸಲಾದ ಗೆಜೆಟ್ ಸಾರ್ವಜನಿಕರಿಗೆ 25-09-1997 ರಂದು ಲಭ್ಯವಾಗಿದೆ.

ಈ ಕರಡು ಪ್ರತಿಯ ಕುರಿತು ರಾಜ್ಯ ಸರ್ಕಾರಕ್ಕೆ ಯಾರಿಂದಲೂ ಆಕ್ಷೇಪಣೆಗಳಾಗಲೀ ಸಲಹೆಗಳಾಗಲೀ ದೊರೆತಿಲ್ಲ. ಆದುದರಿಂದ ಈಗ, ಕರ್ನಾಟಕ ನಾಗರಿಕ ಸೇವಾ ಕಾಯ್ದೆ 1978 (ಕರ್ನಾಟಕ ಅಧಿನಿಯಮ 1990ರ 14) ರ ಪರಿಚ್ಛೇದ 3 ರ ವಿಭಾಗ (1) ಮತ್ತು ಪರಿಚ್ಛೇದ 8ರಲ್ಲಿ ನೀಡಲಾಗಿರುವ ಅಧಿಕಾರವನ್ನು ಚಲಾಯಿಸುವ ಮೂಲಕ, ಕರ್ನಾಟಕ ರಾಜ್ಯ ಸರ್ಕಾರ ಈ ಕೆಳಕಂಡಂತೆ ನಿಯಮಗಳನ್ನು ರೂಪಿಸುತ್ತದೆ. ಅವುಗಳೆಂದರೆ :



# ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ :- ಈ ನಿಯಮವನ್ನು ಕರ್ನಾಟಕ ನಾಗರಿಕ ಸೇವಾ (ನಡವಳಿಕೆ) (ತಿದ್ದುಪಡಿ) ಕಾಯ್ದೆ 1997 ಎಂದು ಕರೆಯಲಾಗುತ್ತದೆ.
   (2) ಅಧಿಕೃತ ಗೆಜೆಟ್ಟಿನಲ್ಲಿ ಪ್ರಕಟಗೊಂಡ ದಿನಾಂಕದಿಂದ ಇವು ಜಾರಿಗೆ ಬಂದಿರುತ್ತವೆ.


2. ಹೊಸ ನಿಯಮ 29A ಯ ಸೇರ್ಪಡೆ :- ಕರ್ನಾಟಕ ನಾಗರಿಕ ಸೇವಾ (ನಡವಳಿಕೆ) ಕಾಯ್ದೆ, 1966ರ ನಿಯಮ 29ರ ನಂತರ ಈ ಕೆಳಕಂಡ ನಿಯಮ ಸೇರ್ಪಡೆಯಾಗುತ್ತದೆ, ಅಂದರೆ:- "29A ಮಕ್ಕಳನ್ನು ಉದ್ಯೋಗಕ್ಕೆ ನೇಮಿಸುವ ಕುರಿತು :- (1) ಸರ್ಕಾರಿ ನೌಕರರು 14 ವರ್ಷ ವಯಸ್ಸಿನ ಕೆಳಗಿನ ಮಗುವನ್ನು ಮನೆ ಕೆಲಸಕ್ಕಾಗಿ ಇಟ್ಟುಕೊಳ್ಳಕೂಡದು.

3. ಉಪ ನಿಯಮ (1) ರ ಉಲ್ಲಂಘನೆಯಾದಲ್ಲಿ ಸರ್ಕಾರಿ ನೌಕರರು ಕೆಟ್ಟ ನಡತೆಯ ಅಪರಾಧಕ್ಕೆ ಒಳಗಾಗಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ಕಾಯ್ದೆ 1957ರ ನಿಯಮ 8 ರ ವಾಕ್ಯಾಂಗ (v) ರಿಂದ (viii) ರಲ್ಲಿ ತಿಳಿಸಲಾಗಿರುವ ಶಿಕ್ಷೆಗಳಿಗೆ ಒಳಗಾಗುತ್ತಾರೆ.

**ಕರ್ನಾಟಕ ರಾಜ್ಯದ ರಾಜ್ಯಪಾಲರ ಆದೇಶದ ಮೇರೆಗೆ ಅವರ ಹೆಸರಿನಲ್ಲಿ**

**ಕೆ. ಎಲ್. ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನೌಕರರು ಮತ್ತು ಆಡಳಿತ ಸುಧಾರಣೆ ಸೇವಾ ನಿಯಮ




SAY YES
TO CHILDREN
STOP
CHILD LABOUR
CHILD RIGHTS ARE
HUMAN RIGHTS
CHILD LABOUR IS
DENIAL OF CHILD HOOD
EMPLOYMENT OF CHILDREN
IS AN OFFENCE
ANY FORM OF LABOUR IS
HAZARDOUS FOR CHILDREN
EDUCATION IS FUNDAMENTAL
RIGHTS OF EVERY CHILD
ಜಿಲ್ಲಾಡಳಿತ, ಯುನಿಸೆಫ್/ ನೊರಾಡ್ ಯೋಜನೆ,
ದಾವಣಗೆರೆ.